ಸಂಪುಟ/Volume : 46
ಸಂಚಿಕೆ/Issue : 05
ಪುಟ/Pages : 12
ಬೆಲೆ/Price : ₹ 15/–

# ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ

ಫೆಬ್ರವರಿ 2024 ಮಾಸ ಪತ್ರಿಕೆ

Akhila Karnataka Shikshaka Samachar | February 2024 | Monthly



ಸ್ಪರ್ಧೆ ಮತ್ತು ಸವಾಲುಗಳು ಜೀವನದಲ್ಲಿ
ಸ್ಫೂರ್ತಿಯಾಗಿ ಕಾರ್ಯನಿರ್ವಹಿಸುತ್ತವೆ,
ಜೀವನದಲ್ಲಿ ಯಾವುದೇ ಸವಾಲುಗಳಿಲ್ಲದಿದ್ದರೆ
ಜೀವನವು ಅರ್ಥಹೀನವಾಗುತ್ತದೆ,
ಸ್ಪರ್ಧೆ ಇರಬೇಕು. ಆದರೆ
ಆ ಸ್ಪರ್ಧೆ ಆರೋಗ್ಯಕರವಾಗಿರಬೇಕು.



A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

ವಾರ್ಷಿಕ ಪರೀಕ್ಷೆಗಳ ತಯಾರಿ ಹಂತದಲ್ಲಿ ಶಿಕ್ಷಕರಿಗೆ ಕಾಡುತ್ತಿರುವ ಪ್ರಶ್ನೆ ಪರೀಕ್ಷೆ ಯಾರಿಗಾಗಿ? ವಾಸ್ತವದಲ್ಲಿ ಇಂದು ನಡೆಯುತ್ತಿರುವ ಪರೀಕ್ಷೆಗಳು ಶಿಕ್ಷಕರಿಗಾ? ಇಲ್ಲವೇ ವಿದ್ಯಾರ್ಥಿಗಳಿಗಾ? ಇಲ್ಲವೇ ಪಾಲಕರಿಗಾ? ಅಥವಾ ಖಾಸಗಿ ಶಿಕ್ಷಣ ಸಂಸ್ಥೆಗಳನ್ನ ಕಟ್ಟಿದ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗಾ? ಏಕೆಂದರೆ ಎಲ್ಲರಲ್ಲೂ ಪರೀಕ್ಷೆಯದೇ ಮಾತುಗಳು. ಶಿಕ್ಷಕರಂತು ತಮ್ಮ ಶಕ್ತಿ ಮೀರಿ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆಯಬೇಕು ಎನ್ನುವ ಕಾರಣಕ್ಕೆ ನಿರಂತರ ಪ್ರಯತ್ನದಲ್ಲಿದ್ದಾರೆ. ಇತ್ತೀಚಿನ ದಿನಗಳಲ್ಲಿ ಪರೀಕ್ಷೆಗಳು, ಅದರಲ್ಲೂ ಪಬ್ಲಿಕ್ ಪರೀಕ್ಷೆಗಳು ಶಿಕ್ಷಕರಲ್ಲಿ ಒಂದು ತರಹದ ಒತ್ತಡ ನಿರ್ಮಾಣ ಮಾಡುತ್ತಿದೆ. ಇಲಾಖೆಯ ಮಾರ್ಗಸೂಚಿ, ಅಧಿಕಾರಿಗಳ ಒತ್ತಡ, ಸಮಾಜದ ಒತ್ತಡ ಇವೆಲ್ಲವುಗಳ ಮಧ್ಯದಲ್ಲಿ ತನ್ನ ವಿದ್ಯಾರ್ಥಿಗಳು ಹೆಚ್ಚು ಅಂಕ ಪಡೆಯಬೇಕು ಎನ್ನುವ ಮಾನಸಿಕತೆ ಶಿಕ್ಷಕರಲ್ಲಿ ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಒತ್ತಡದ ಜೀವನ ನಿರ್ಮಾಣ ಮಾಡಿದೆ. ಈ ಸಂಕ್ರಮಣದ ಕಾಲದಲ್ಲಿ ಶಿಕ್ಷಕರು ಒತ್ತಡದಿಂದ ಹೊರಬರುವ ಅವಶ್ಯಕತೆ ಇದ್ದೇ ಇದೆ. ಸರ್ಕಾರಿ/ ಅನುದಾನಿತ/ ಅನುದಾನ ರಹಿತ ಸಂಸ್ಥೆಯಲ್ಲಿ ಕಾರ್ಯಮಾಡುವ ಶಿಕ್ಷಕರು ಪರೀಕ್ಷಾ ಭಯದಲ್ಲಿರುವರು. ಇಂದು ಪರೀಕ್ಷಾ ಭಯ ಹೋಗಲಾಡಿಸುವುದು ವಿದ್ಯಾರ್ಥಿಗಳಿಗಿಂತ ಶಿಕ್ಷಕರಿಗೆ ಅವಶ್ಯವಿದೆ. ಶಿಕ್ಷಕರೆ ನೀವು ಈ ಒತ್ತಡದಿಂದ ಹೊರಬನ್ನಿರಿ. ಬೇರೆಲ್ಲರೂ ಏನೇ ಪ್ರಯತ್ನ ಮಾಡಿದರೂ ಅಂತಿಮವಾಗಿ ಪರೀಕ್ಷೆ ಎದುರಿಸಬೇಕಾದದ್ದು ವಿದ್ಯಾರ್ಥಿಗಳೇ. ಹೀಗಾಗಿ ವಿದ್ಯಾರ್ಥಿಗಳನ್ನು ಪರೀಕ್ಷೆ ತಯಾರಿ ಮಾಡೋಣ, ಪರೀಕ್ಷೆಗಳಲ್ಲಿ ಯಶಸ್ಸು ಗಳಿಸುವುದು ಮುಖ್ಯವಾದದ್ದು, ಆದರೆ ಪರೀಕ್ಷೆಗಳೇ ಜೀವನವಲ್ಲ.

ವಿದ್ಯಾರ್ಥಿಗಳೇ, ಪರೀಕ್ಷೆಗಳು ಜೀವನದಲ್ಲಿ ಒಂದೊಂದೇ ಮೆಟ್ಟಿಲುಗಳಾಗಬೇಕು. ಆದರೆ ನಮ್ಮ ಮುಂದಿರುವ ಪರೀಕ್ಷೆಯೇ ಅಂತಿಮವಾದದ್ದಲ್ಲ. ಪರೀಕ್ಷೆಗೆ ತಯಾರಿ ಮಾಡಿರಿ. ನಿಮಗಿರುವ ಶೈಕ್ಷಣಿಕ ಮತ್ತು ಪಠ್ಯದ ಸಮಸ್ಯೆಗಳನ್ನು ಶಿಕ್ಷಕರೊಂದಿಗೆ ಚರ್ಚಿಸಿ ಬಗೆಹರಿಸಿಕೊಳ್ಳಿ. ನಿಮ್ಮ ತಂದೆ ತಾಯಿಗಳು ತಮಗಿರುವ ಕಷ್ಟಗಳನ್ನು ಬಿಟ್ಟು ನಿಮ್ಮಗಳಿಗಾಗಿ ನಿಮ್ಮ ಯಶಸ್ಸನ್ನು ನೋಡುವುದಕ್ಕಾಗಿ ಹಗಲು ರಾತ್ರಿ ಎನ್ನದೆ ನಿಮಗೆ ಸಹಾಯ ಮಾಡುತ್ತಿರುವ ಪಾಲಕರ ಶ್ರಮಕ್ಕೆ ಬೆಲೆ ಬರಬೇಕೆಂದರೆ ತಾವುಗಳು ಸರಿಯಾದ ನಿಟ್ಟಿನಲ್ಲಿ ಪ್ರಯತ್ನ ಮಾಡಿ ಪರೀಕ್ಷೆ ಎದುರಿಸುವುದು ಅವಶ್ಯವಿದೆ.

ಪರೀಕ್ಷಾ ಕಾರ್ಯದಲ್ಲಿ ಜೊತೆಯಲ್ಲಿರುವ ಶಿಕ್ಷಣ ಇಲಾಖೆ ತನ್ನದೇ ಆದ ಅನೇಕ ಕಾರ್ಯಸೂಚಿಗಳನ್ನು ಹಾಕಿಕೊಂಡು ವಿದ್ಯಾರ್ಥಿಗಳಿಗೆ ಸುಲಭವಾಗಿ ಪರೀಕ್ಷೆ ಎದುರಿಸಲು ಸಹಾಯ ಮಾಡುತ್ತದೆ. ಹಾಗೆ ಪೋಷಕರೆ ಗಮನಿಸಿ... ಮಗು ಪರೀಕ್ಷೆಯಲ್ಲಿ ಪಾಸಾಗಬೇಕು, ಹೆಚ್ಚು ಅಂಕಗಳನ್ನು ಪಡೆಯಬೇಕೆನ್ನುವುದು ತಪ್ಪಿಲ್ಲ. ಆದರೆ ಈ ಪರೀಕ್ಷೆಗಳೇ ಜೀವನಕ್ಕೆ ಅಂತಿಮವಲ್ಲ ಅನ್ನುವ ಸತ್ಯವನ್ನು ಅರಿತುಕೊಳ್ಳುವುದು ಅವಶ್ಯವಿದೆ. ಹಾಗೆ ಅನೇಕ ಸ್ವಯಂಸೇವಾ ಸಂಸ್ಥೆಗಳು ಪರೀಕ್ಷಾ ಕಾರ್ಯಕ್ಕೆ ಸಹಕಾರಿಯಾಗಿ ಅನೇಕ ಕಾರ್ಯಗಳನ್ನ ಮಾಡುತ್ತಿವೆ. ಅವುಗಳ ಸಹಕಾರವನ್ನು ಗೌರವಪೂರ್ವಕವಾಗಿ ಸ್ಮರಿಸಿಕೊಳ್ಳುವುದು ಅವಶ್ಯವಿದೆ.

ಪರೀಕ್ಷೆಗಳನ್ನು ಎದುರಿಸುವಲ್ಲಿ ನಮ್ಮೆಲ್ಲರ ಪ್ರಯತ್ನವಿರಲಿ. ವಿದ್ಯಾರ್ಥಿಗಳು ಯಶಸ್ಸನ್ನು ಸಾಧಿಸಲಿ, ಮುಂದಿನ ಶೈಕ್ಷಣಿಕ ವರ್ಷವನ್ನು ವಿದ್ಯಾರ್ಥಿಗಳು ಸಂತೋಷದಿಂದ ಬರಮಾಡಿಕೊಳ್ಳಲಿ ಎನ್ನುವುದು ನಮ್ಮೆಲ್ಲರ ಆಸೆಯಲ್ಲವೆ?

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎಸ್.


## ಪರಿವಿಡಿ


- ರಾಮ ಮಂದಿರ ನಿರ್ಮಾಣದಿಂದ ಅಖಂಡ ಹಿಂದೂ ಸಾಮ್ರಾಜ್ಯ ಸ್ಥಾಪನೆ 3
- ಪರೀಕ್ಷಾ ತಯಾರಿಯಲ್ಲಿ ವಿದ್ಯಾರ್ಥಿ, ಶಿಕ್ಷಕ, ಪಾಲಕ 4
- ಕಾದಿದ್ದಳು ಶಬರಿ ಶ್ರೀರಾಮನ ಮಂತ್ರಾಕ್ಷತೆಗಾಗಿ 5
- ರಾಮನ್ ಸಾಧನೆಯ ಪ್ರತೀಕ ರಾಷ್ಟ್ರೀಯ ವಿಜ್ಞಾನ ದಿನ 7
- ಬೆಂಗಳೂರು ಉತ್ತರ ಜಿಲ್ಲೆಯ ಪದಾಧಿಕಾರಿಗಳ ಪ್ರವಾಸ 9
- ವಿದ್ಯಾರ್ಥಿಗಳಿಗೆ ಪ್ರಧಾನಮಂತ್ರಿಗಳ ಸಲಹೆಗಳು 10
- ಸಂಕಲ್ಪ ದಿನಾಚರಣೆ 11
- ರಾಜ್ಯದ ವಿವಿಧೆಡೆ ನಡೆದ ಸಂಕಲ್ಪ ದಿನಾಚರಣೆ 12

# ರಾಮ ಮಂದಿರ ನಿರ್ಮಾಣದಿಂದ ಅಖಂಡ ಹಿಂದೂ ಸಾಮ್ರಾಜ್ಯ ಸ್ಥಾಪನೆ



**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು

ಅಂದು... ಹದಿನೆಂಟನೇ ಶತಮಾನದಲ್ಲಿ ಅಖಂಡ ಹಿಂದೂ ಸಾಮ್ರಾಜ್ಯದ ಸ್ಥಾಪನೆಗಾಗಿ ಎಡೆಬಿಡದೆ ಹೋರಾಟ ಮಾಡಿದ ಮರಾಠಾ ಸಾಮ್ರಾಜ್ಯದ ಛತ್ರಪತಿ ಶಿವಾಜಿ ದೇಶದ ಇತಿಹಾಸದಲ್ಲಿ ಅಗ್ರಪಂಕ್ತಿಯಲ್ಲಿ ರಾರಾಜಿಸುತ್ತಿದ್ದಾನೆ. ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಹಿಂದೂ ಧರ್ಮ ರಕ್ಷಣೆಯ ಕಾರ್ಯದಲ್ಲಿ ಆತನ ಶ್ರದ್ಧೆ, ಕಠಿಣ ಶ್ರಮ, ಪ್ರಾಮಾಣಿಕ ಪ್ರಯತ್ನ, ತೋರಿದ ಧೈರ್ಯ ಸಾಹಸಗಳು, ಇಂದಿಗೂ ಪ್ರೇರಣಾದಾಯಿಯಾಗಿವೆ. ಆದರ್ಶ ರಾಜ್ಯದ ಸ್ಥಾಪನೆಗಾಗಿ ಆತ ನಡೆಸಿದ ಸಂಘಟನಾ ಚಾತುರ್ಯದ ನಡೆಗಳು, ಆತನಲ್ಲಿದ್ದ ಉತ್ಕಟ ದೇಶಪ್ರೇಮ, ಕಾರ್ಯ ಸಾಧನೆಗಾಗಿ ತೋರುತ್ತಿದ್ದ ಸಹನೆ, ಚಾಕಚಕ್ಯತೆ ಎಲ್ಲವೂ ಅನುಕರಣೀಯವಾಗಿಯೇ ಉಳಿದಿವೆ. ದೇಶದ ಅಖಂಡತೆಗೆ ಭಂಗ ತರುತ್ತಿದ್ದ ಹೊರಗಿನಿಂದ ಬಂದಿದ್ದ ಶತ್ರುಗಳನ್ನು ಸದೆಬಡಿದು ದೇಶೀಯರಲ್ಲಿ ಐಕ್ಯತೆಯನ್ನು ತಂದು, ಸ್ವದೇಶಾಭಿಮಾನವನ್ನು ಮೆರೆದವನು ಶಿವಾಜಿ.

ಇಂದು... ಅಖಂಡ ಹಿಂದೂ ಸಾಮ್ರಾಜ್ಯವನ್ನು ಮತ್ತೆ ಕಾಣುತ್ತಿರುವ ಶುಭಕಾಲ ಎದುರಾಗಿದೆ. ಹೊರಗಿನ ಅಡ್ಡಿ, ಆತಂಕಗಳಿಗಿಂತ ದೇಶದೊಳಗೇ ಅನೇಕ ಆಂತರಿಕ ರಾಜಕೀಯ ವಿರೋಧಿ ಶಕ್ತಿಗಳು ತಲೆಯೆತ್ತಿ, ಅಖಂಡತೆಯ ಭದ್ರತೆಯನ್ನು ಕಿತ್ತುಹಾಕಲು ನಿರಂತರವಾಗಿ ಶ್ರಮಿಸುತ್ತಿರುವ ದೇಶವಿರೋಧಿ ಹಾಗೂ ದೇಶದ್ರೋಹಿ ದುಷ್ಟಶಕ್ತಿಗಳನ್ನು ಬಗ್ಗುಬಡಿಯಲೆಂದೇ ಎನ್ನುವಂತೆ ಅಯೋಧ್ಯೆಯಲ್ಲಿ ರಾಮಮಂದಿರದ ನಿರ್ಮಾಣವಾಗಿ, ರಾಮಲಲ್ಲಾನ ಮೂರ್ತಿಯ ಪ್ರತಿಷ್ಠಾಪನೆಯಾಗಿದೆ. ದೇಶದ ಎಲ್ಲ ಕಡೆಗಳಿಂದ ಅಸಂಖ್ಯಾತ ರಾಮಭಕ್ತರು ತಮ್ಮ ಆರಾಧ್ಯಮೂರ್ತಿಯ ದರ್ಶನ ಮಾಡಲು ಅಯೋಧ್ಯೆಯತ್ತ ಧಾವಿಸುತ್ತಿದ್ದಾರೆ. ಅಲ್ಲಿ ಜಾತಿ, ಭಾಷೆ, ವರ್ಗ ಯಾವುದೂ ಅಡ್ಡಬರುತ್ತಿಲ್ಲ. ಆದರ್ಶ ಮಾನವ, ಮರ್ಯಾದಾ ಪುರುಷೋತ್ತಮ 'ರಾಮ' ಎಲ್ಲರನ್ನು ತನ್ನತ್ತ ಭೇದಭಾವವಿಲ್ಲದೆ ಕರೆಯುತ್ತಿದ್ದಾನೆ. ಶತಶತಮಾನಗಳಿಂದ ನಿರೀಕ್ಷಿಸುತ್ತಿದ್ದ ಕಾಲಕ್ಕೆ ಸಾಕ್ಷಿಯಾದ ಸಂತೋಷ ಎಲ್ಲರ ತನುಮನಗಳಲ್ಲಿ ಸಾರ್ಥಕ ಭಾವವನ್ನು ಮೂಡಿಸುತ್ತಿದೆ. ಆಂತರಿಕವಾಗಿ ಎಷ್ಟೇ ಸಮಸ್ಯೆಗಳಿದ್ದರೂ, ಅದು ರಾಜ್ಯಮಟ್ಟದ್ದಿರಲಿ, ವೈಯಕ್ತಿಕವಾದದ್ದಿರಲಿ ಎಲ್ಲವನ್ನೂ 'ರಾಮಮಂತ್ರ' ಮರೆಸಿಬಿಟ್ಟಿದೆ. ರಾಮಮಂದಿರದ ಉದ್ಘಾಟನೆಯಾಗಲಿದೆಯೆಂಬ ಶುಭಸುದ್ದಿಯೇ ದೇಶವಿಡೀ ಸಂಭ್ರಮವನ್ನು ತುಂಬಿತ್ತು. 2024ರ ಜನವರಿ 22ಕ್ಕಾಗಿ ಇಡೀ ಭಾರತದ ಜನತೆ ಕಾತುರದಿಂದ ಅತ್ಯುತ್ಸಾಹದಿಂದ ಕಾಯುವಂತಾಗಿತ್ತು. ಯಾರಲ್ಲಿಯೂ ಆ ಶುಭ ಘಳಿಗೆಯನ್ನು ಸ್ವಾಗತಿಸುವ ಕುರಿತು ಮತಭೇದವಿರಲಿಲ್ಲ. ಭಾವೈಕ್ಯತೆಯಿಂದ ಪ್ರತಿಯೊಬ್ಬರೂ ಒಂದಾಗಿ ತಮ್ಮ ತಮ್ಮ ಶಕ್ತ್ಯಾನುಸಾರ ಅಂತಹದೊಂದು ಮಹಾನ್ ಕಾರ್ಯಕ್ಕಾಗಿ ಸೇವೆ ಸಲ್ಲಿಸಲು ಮುಂದಾಗಿದ್ದರು. ದೇಶವಿಡೀ ಸಂಚಾರ ಮಾಡಿದ ರಥಯಾತ್ರೆಯಲ್ಲಿ ಸಂಗ್ರಹವಾದ ಲಕ್ಷಾಂತರ ಇಟ್ಟಿಗೆಗಳು ಆಯಾ ರಾಜ್ಯಭಾಷೆಯಲ್ಲಿ 'ಜೈಶ್ರೀರಾಮ್' ಎಂಬ ನಾಮಧೇಯದೊಂದಿಗೆ ಅಲಂಕೃತಗೊಂಡು ಮಂದಿರ ನಿರ್ಮಾಣದಲ್ಲಿ ತಮ್ಮ ಅಳಿಲು ಸೇವೆಯನ್ನು ಸಲ್ಲಿಸಲು ಪೈಪೋಟಿಯಲ್ಲಿ ನಿಂತಿದ್ದವು. ತನು, ಮನ, ಧನ ಸಮರ್ಪಣೆಯನ್ನು ಅಪಾರ ಸಂಖ್ಯೆಯಲ್ಲಿ ಜನರು ತುದಿಗಾಲಿನಲ್ಲಿ ನಿಂತು ಮಾಡಿದ್ದರು. ಸುದೀರ್ಘ ಕಾಲದಿಂದ ಅದಕ್ಕಾಗಿ ನಡೆಸಿದ ಹೋರಾಟದಲ್ಲಿ ಲಕ್ಷಾಂತರ ಭಕ್ತರ ಬಲಿದಾನವೂ ನಡೆದುಹೋಯಿತು. ಏಕೆಂದರೆ ಭಾರತೀಯರಿಗೆ 'ರಾಮ' ಕೇವಲ ಒಬ್ಬ ಅವತಾರ ಪುರುಷನಷ್ಟೇ ಆಗಿಲ್ಲ. ಮೂರ್ತಿಪೂಜೆಯನ್ನು ಹಲವು ರೂಪಗಳಲ್ಲಿ ಮಾಡುತ್ತ ಬಂದಿರುವ ಹಿಂದೂಗಳಿಗೆ 'ರಾಮ' ನನ್ನು ಪೂಜಿಸುವುದೆಂದರೆ ಇತರ ಮೂರ್ತಿಯಂತೆ ಮಾತ್ರವಲ್ಲ, ಆತನೊಬ್ಬ ದೇವಮಾನವ, ರಾಮನ ಆದರ್ಶ ಗುಣಗಳಾದ ಪಿತೃವಾಕ್ಯಪಾಲನೆ, ವಚನಪಾಲನೆ, ಪ್ರಜಾವಾತ್ಸಲ್ಯ, ಗುರುಹಿರಿಯರಲ್ಲಿ ಭಕ್ತಿ, ಏಕಪತ್ನೀವ್ರತ, ಧರ್ಮ ಸಂಸ್ಥಾಪನೆಯಲ್ಲಿ ನಿಷ್ಠೆ, ಕರ್ತವ್ಯಶ್ರದ್ಧೆ, ಭ್ರಾತೃವಾತ್ಸಲ್ಯ, ದೈವಭಕ್ತಿ, ನ್ಯಾಯನಿರ್ಣಯದಲ್ಲಿ ನಿಷ್ಪಕ್ಷಪಾತ ದೃಷ್ಟಿಕೋನ, ಎಲ್ಲವೂ ಒಬ್ಬ ಆದರ್ಶ ಮಾನವನಾಗಿ, ಜೀವಂತ ದಂತ ಕಥೆಯಾಗಿಸಿವೆ. ತ್ರೇತಾಯುಗ ಕಳೆದು ಅಂದರೆ ರಾಮನು ಹುಟ್ಟಿ ಸಾವಿರ ಸಾವಿರ ವರ್ಷಗಳೇ ಕಳೆದಿದ್ದರೂ ಆತ ಒಬ್ಬ ಐತಿಹಾಸಿಕ ಪುರುಷನಾಗಿ ಎಲ್ಲ ಹಿಂದೂಗಳ ರಕ್ತದ ಕಣಕಣದಲ್ಲಿಯೂ ಸೇರಿಹೋಗಿದ್ದಾನೆ ಪರಸ್ಪರರನ್ನು ಕಂಡಾಗ 'ರಾಮ್‌ರಾಮ್' ಎಂದೇ ಮಾತು ಆರಂಭಿಸುವ ಮಟ್ಟಿಗೆ ಎಲ್ಲರ ಹೃದಯದಲ್ಲಿ ಶಾಶ್ವತವಾಗಿ ಕುಳಿತುಬಿಟ್ಟಿದ್ದಾನೆ. ಅವನು ಎಲ್ಲರ ರಾಮ, ಎಲ್ಲರ ಆರಾಧ್ಯ ದೇವನಾಗಿರುವ ರಾಮ. ಅದರಿಂದಲೇ ಮಂದಿರದಲ್ಲಿ ಪೂಜೆ ಸ್ವೀಕರಿಸಬೇಕಾದವನು ಒಂದು ಗುಡಾರದಲ್ಲಿ ಕುಳಿತು ಹಲವು ಹಂತಗಳ ಭದ್ರತಾಪಡೆಗಳ ನಡುವೆ ಬಂದಿಯಾಗಿ ಕುಳಿತಿರುವುದನ್ನು ಕಂಡಾಗಲೆಲ್ಲ ಭಕ್ತರ ಹೃದಯ ಆರ್ದ್ರವಾಗುತ್ತಿತ್ತು. ಭಾವುಕತೆಯಿಂದ ಕಣ್ತುಂಬಿ ಬರುತ್ತಿತ್ತು. ಎಂದಿಗೆ ಮಂದಿರದಲ್ಲಿ ವಿರಾಜಮಾನನಾದ ರಾಮನನ್ನು ಕಾಣುವುದೋ ಎಂದು ಹಂಬಲಿಸುವಂತಾಗಿತ್ತು.

ಅದೀಗ ಕೈಗೂಡಿದೆ. ತಮ್ಮ ಮನದ ಅಭಿಲಾಷೆಯು ನೆರವೇರಿಸುವುದನ್ನು ತಿಳಿಯುತ್ತಿದ್ದಂತೆಯೇ ಜನಸಾಗರವೇ ಲಕ್ಷ ಲಕ್ಷ ಸಂಖ್ಯೆಯಲ್ಲಿ ರಾಮಲಾಲ್ಲಾನ ಮೂರ್ತಿಯನ್ನು ಕಣ್ತುಂಬಿಕೊಳ್ಳಲು ಅಯೋಧ್ಯೆಯತ್ತ ಧಾವಿಸುತ್ತಿದ್ದಾರೆ. ದೇಶವೇ ಒಂದಾಗಿ ರಾಮನತ್ತ ಹೊರಟಿದೆ. ಜಾತಿ, ಮತ, ಭಾಷೆ, ಶ್ರೀಮಂತ, ಬಡವ, ಸ್ತ್ರೀ, ಪುರುಷ, ನೌಕರ, ಮಾಲೀಕ, ವಿದ್ಯಾವಂತ, ಅನಕ್ಷರಸ್ಥ ನಗರ, ಹಳ್ಳಿಯೆನ್ನದೆ ಸಕಲ ಜನರೂ ಅಯೋಧ್ಯೆಯತ್ತ ಮುಖ ಮಾಡಿದ್ದಾರೆ. ದೇಶದ ಮೂಲೆಮೂಲೆಗಳಿಂದ ತಲುಪುತ್ತಿರುವ ಜನರಿಂದ ಅಯೋಧ್ಯೆಯು ತುಂಬಿ ತುಳುಕುತ್ತಿದೆ. ಯಾವ ಸೌಲಭ್ಯಗಳ ನಿರೀಕ್ಷೆಯನ್ನೂ ಮಾಡದ ಜನರ ಕಣ್ಮನಗಳಲ್ಲಿ ತುಂಬಿರುವುದೊಂದೇ. ಅದೇ ರಾಮನ ದರ್ಶನ, ಅದನ್ನು ಪಡೆದುಕೊಂಡ ಭಕ್ತ ಜನರು ಬಹುನಿರೀಕ್ಷಿತ ಸಂತೋಷದಲ್ಲಿ ಮುಳುಗಿ ಹೋಗುತ್ತಿದ್ದಾರೆ. ತಮ್ಮ ಪ್ರೀತಿಯ ರಾಮನಿಗೆಂದು ಕಾಣಿಕೆಗಳನ್ನು ಹಲವು ಬಗೆಗಳಲ್ಲಿ ಒಪ್ಪಿಸುತ್ತಿರುವವರು ಕೇವಲ

ಪುಟ 8 ಕ್ಕೆ ➢

# ಪರೀಕ್ಷಾ ತಯಾರಿಯಲ್ಲಿ ವಿದ್ಯಾರ್ಥಿ, ಶಿಕ್ಷಕ, ಪಾಲಕ

**ಚಿದಾನಂದ ಆ ಕೇಸ್ಕರ ಪಾಟೀಲ**
ಎಂ.ಎ. ಇತಿಹಾಸ, ಎಂ.ಎ. ಸಮಾಜಶಾಸ್ತ್ರ.
ಎಂ.ಎಸ್ಸಿ. ಭೂಗೋಳಶಾಸ್ತ್ರ.
ಅಧ್ಯಾಪಕರು –– ಬೆಳಗಾವಿ.
9449114285, chidapatil@gmail.com



ಕರ್ನಾಟಕದಲ್ಲಿ ಮಾರ್ಚ್, ಏಪ್ರಿಲ್ ತಿಂಗಳು ಶೈಕ್ಷಣಿಕ ಸುಗ್ಗಿಯ ಕಾಲ. ಈ ದಿನಗಳಲ್ಲಿ ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಸುಗ್ಗಿಯ ಕಾಲ. ಈ ದಿನಗಳಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪಾಲಕರು ತಮ್ಮ ಶಕ್ತಿಗೆ ಅನುಸಾರವಾಗಿ ಪರೀಕ್ಷೆಯಲ್ಲಿ ಯಶಸ್ಸು ಗಳಿಸಲು ಪ್ರಯತ್ನಿಸುತ್ತಿರುತ್ತಾರೆ. ವಿದ್ಯಾರ್ಥಿಗಳು ಪರೀಕ್ಷೆ ಬರೆಯುವವರಾದರೂ ಪ್ರಯತ್ನದಲ್ಲಿ ಶಿಕ್ಷಕ ಮತ್ತು ಪಾಲಕರ ಪಾಲು ಬಹುದೊಡ್ಡದು. ಈ ಲೇಖನದಲ್ಲಿ ಹೆಚ್ಚು ಪಾಲನ್ನು ವಿದ್ಯಾರ್ಥಿಗಳ ಗಮನದಲ್ಲಿ ಇಟ್ಟುಕೊಂಡು ಬರೆಯುವೆ.

**ನನ್ನ ಅಕ್ಕರೆಯ, ಸಕ್ಕರೆಯಂತ ಮುದ್ದು ಮಕ್ಕಳೇ..**

- ಇಂದು, ನಾಳೆ ಎಂದು ಓದನ್ನು ಮುಂದಕ್ಕೆ ಹಾಕಬೇಡಿ. ಈ ದಿನ, ಈ ಘಳಿಗೆಯೇ ನಿಮಗೆ ಒಳ್ಳೆಯದೆಂದು ಭಾವಿಸಿಕೊಂಡು ಓದಲು ಪ್ರಾರಂಭಿಸಿ.
- ಸಕಾರಾತ್ಮಕವಾಗಿ ನಾನು ಎಲ್ಲವನ್ನು ಎದುರಿಸಬಲ್ಲೆ ಎನ್ನುವ ಮನೋಭಾವದಿಂದ ಇಷ್ಟಪಟ್ಟು ಓದಲು ಪ್ರಾರಂಭಿಸಿ.
- ಆಕರ್ಷಣೆಗಳಿಂದ ಸಾಧ್ಯವಾದಷ್ಟು ದೂರ ಇರಬೇಕು. ಮನೆಯವರ ಜೊತೆಯಲ್ಲಿ ಮನಸ್ತಾಪ ಮಾಡಿಕೊಳ್ಳದಿರುವುದು ಒಳ್ಳೆಯದು. ಒಂದು ಬಾರಿ ಓದಲು ಕುಳಿತರೆ ಕನಿಷ್ಠ ಒಂದು ಘಂಟೆ ಎದ್ದೇಳಬಾರದು.
- ಸಹಪಾಠಿಗಳು ಮತ್ತು ಸಂಬಂಧಿಗಳು ಪ್ರಾರಂಭದಲ್ಲಿ ನೀವು ಓದುವುದನ್ನು ಕಂಡು ಏನು ರ್‍ಯಾಂಕ್ ಬರುತ್ತೀಯಾ? ಎಂದು ಚುಡಾಯಿಸಬಹುದು. ಆಗ ನೀವು 'ಹೌದು ನಾನು ರ್‍ಯಾಂಕ್ ಬರುತ್ತೇನೆ' ಎಂದು ಹೇಳಿರಿ. ರ್‍ಯಾಂಕ್ ಬರುವವರು ನಿಮ್ಮಂತೆ ನಿಮ್ಮ ತರಗತಿಯಲ್ಲಿಯೇ ಓದುವವರು. ಹಾಗಾದರೆ ನೀವೇಕೆ ರ್‍ಯಾಂಕ್ ಬರಬಾರದು? ಸಾಧನೆ ಯಾರ ಸ್ವತ್ತಲ್ಲ.
- ಊಟ ಮತ್ತು ತಿಂಡಿ ಹಿತ ಮಿತವಾಗಿರಲಿ. ಇದ್ದುದರಲ್ಲೇ ಸಾಧ್ಯವಾದಷ್ಟು ಬಿಸಿಯಾದ ಆಹಾರ ಸೇವಿಸಿರಿ. ದಿನದಲ್ಲಿ ಸ್ವಲ್ಪ ವ್ಯಾಯಾಮ ಇದ್ದರೆ ಒಳ್ಳೆಯದು.
- ಸಾಧನೆ ಮಾಡಬೇಕೆಂದು ಹೊರಟವನಿಗೆ ಕಷ್ಟಗಳು ಬರುತ್ತವೆ. 'ಕುಳಿತವನು ಎಂದೂ ಬೀಳಲಾರ.." ಅದಕ್ಕಾಗಿ ಕಷ್ಟಗಳಿಗೆ ಹೆದರಬೇಕಿಲ್ಲ.
- ಓದಿದ್ದೆಲ್ಲ ಮರೆಯುತ್ತದೆ ಎಂದು ಓದು ನಿಲ್ಲಸಬೇಡಿ. ಮತ್ತೆ ಮತ್ತೆ ಓದಿರಿ ಅದು ತನ್ನಿಂದ ತಾನೇ ನಿಮ್ಮ ಹತ್ತಿರಕ್ಕೆ ಬರುತ್ತದೆ.
- ಬೆಳಿಗ್ಗೆ ಎದ್ದಾಗ ನೀವು ನಂಬುವ ದೇವರನ್ನು ಸ್ವಲ್ಪ ಹೊತ್ತು ಪ್ರಾರ್ಥನೆ ಮಾಡಿರಿ. ಪ್ರಾರ್ಥನೆ ನಿಮಗೆ ಇನ್ನಷ್ಟು ಚೈತನ್ಯ ನೀಡುತ್ತದೆ.
- ನನಗೆ ಅದು ಇಲ್ಲ, ಇದು ಇಲ್ಲ ಎನ್ನುವ ಇಲ್ಲಗಳ ಮಾನಸಿಕತೆಯಿಂದ ಹೊರಬರಬೇಕು.
- ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲು ಪಠ್ಯಪುಸ್ತಕವೇ ನಮಗೆ ದಾರಿ ದೀಪ.
- ಶಿಕ್ಷಕರು ಮತ್ತು ಪಾಲಕರು ವಿದ್ಯಾರ್ಥಿಗಳ ಪರೀಕ್ಷೆಗಳಿಗೆ ಪೂರಕವಾಗಿ ಕಾರ್ಯಮಾಡುವುದು, ದಾರಿ ತೋರಿಸುವರು. ಆದರೆ ನಡೆದು ಹೋಗಿ ಗುರಿ ತಲುಪುವುದು ವಿದ್ಯಾರ್ಥಿಗಳೇ.... ಹೀಗಾಗಿ ಪರೀಕ್ಷೆ ಬರೆಯುವುದು ವಿದ್ಯಾರ್ಥಿಗಳ ಕೆಲಸ.
- ನಾವು ಎಷ್ಟೆಲ್ಲ ತಯಾರಿ ಮಾಡಿಕೊಂಡರು ಪರೀಕ್ಷೆಯ ಹಿಂದಿನ ದಿನ ಮತ್ತು ಪರೀಕ್ಷೆಯ ಸಮಯದಲ್ಲಿ ನಾವು ಅನುಸರಿಸುವ ಕ್ರಮಗಳು ನಮ್ಮ ಯಶಸ್ಸಿಗೆ ಸಹಾಯವಾಗುತ್ತವೆ.
- ನಾಳೆ ಪರೀಕ್ಷೆ ಎಂದರೆ ಅದರ ಮುಂಚಿನ ದಿನ ಪರೀಕ್ಷಾ ಸಮಯದಲ್ಲಿ ಅವಶ್ಯವಾಗಿರುವ ವಸ್ತುಗಳನ್ನು (ನಾವು ಹಾಕಿಕೊಳ್ಳುವ ಬಟ್ಟೆ, ಉಪಯೋಗಿಸುವ ವಸ್ತುಗಳನ್ನು) ಹೊಂದಿಸಿಕೊಂಡು ಇಟ್ಟುಕೊಳ್ಳಬೇಕು ಮತ್ತು ಪರೀಕ್ಷೆಗೆ ಹೊರಡುವ ಮುನ್ನ ಒಂದು ಬಾರಿ ಪರೀಕ್ಷಿಸಿಕೊಳ್ಳಬೇಕು.
- ಪರೀಕ್ಷೆಯ ದಿನ ಪರೀಕ್ಷಾ ಕೇಂದ್ರಕ್ಕೆ ಕನಿಷ್ಠ ಪಕ್ಷ ಒಂದು ಗಂಟೆಯ ಮುಂಚೆ ತಲುಪಬೇಕು.
- ಮನಸ್ಸು ಶಾಂತವಾಗಿ ಇಟ್ಟುಕೊಳ್ಳಬೇಕು, ಪ್ರಶ್ನೆ ಪತ್ರಿಕೆ ಕೈಸೇರಿದ ಮೇಲೆ ಮೊದಲು ಅಲ್ಲಿರುವ ಸೂಚನೆಗಳನ್ನು ಓದಿದ ನಂತರ ಪ್ರಶ್ನೆಪತ್ರಿಕೆಯನ್ನು ಪೂರ್ಣವಾಗಿ ಓದಬೇಕು.
- ಉತ್ತರ ಪತ್ರಿಕೆಯ ಮೇಲೆ ನಿಮ್ಮ ನೋಂದಣಿ ಸಂಖ್ಯೆ ಬರೆಯಬೇಕು. ನಂತರ ಸ್ವಲ್ಪ ಸರಳ ಎನ್ನುವ ಪ್ರಶ್ನೆಗಳಿಗೆ ಉತ್ತರ ಬರೆಯಬೇಕು, ನಂತರ ಕಠಿಣ ಎನ್ನುವ ಪ್ರಶ್ನೆಗಳಿಗೆ ಉತ್ತರ ಬರೆಯಲು ಪ್ರಯತ್ನಿಸಬೇಕು, ಕಠಿಣ ಎನಿಸುವ ಪ್ರಶ್ನೆಗಳನ್ನು ಬರೆಯುವಾಗ ಒಂದು ನೆನಪಿನಲ್ಲಿರಲಿ "ಒಂದು ವರ್ಷ ಒಂದು ಪಠ್ಯವನ್ನ ಓದಿದ ನೀವುಗಳು ಪ್ರತಿ ಪ್ರಶ್ನೆಗೆ ಉತ್ತರ ಬರೆಯಬಲ್ಲಿರಿ. ಹೀಗಾಗಿ ಪ್ರಶ್ನೆ ಪತ್ರಿಕೆಯ ಯಾವುದೇ ಪ್ರಶ್ನೆಗಳಿಗೆ ಉತ್ತರ ಬರೆಯದೇ ಬಿಡಬೇಡಿ.
- ಪ್ರಶ್ನೆಗಳ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಸರಿಯಾಗಿ ಬರೆಯಿರಿ ಮತ್ತು ಉತ್ತರಗಳ ಪ್ರಶ್ನೆಗಳಿಗೆ ಇರುವ ಅಂಕಗಳನ್ನು ಗಮನದಲ್ಲಿ ಇರಿಸಿಕೊಂಡು ಬರೆಯಿರಿ.
- ಉತ್ತರ ಬರೆಯುವಾಗ ಪುಸ್ತಕ ಭಾಷೆ ಬಳಕೆ ಮಾಡಬೇಕು ಆದರೆ ಕಷ್ಟ ಎನಿಸಿದರೆ ನಿಮ್ಮ ಸ್ವಂತ ವಾಕ್ಯದಲ್ಲಿಯೇ ಬರೆಯಿರಿ.
- ಅಕ್ಷರಗಳು ಸ್ಪಷ್ಟವಾಗಿ ಕಾಣುವಂತೆ ಇರಲಿ. ವಿವರಣಾತ್ಮಕ ಪ್ರಶ್ನೆಗಳಿಗೆ ಮುಖ್ಯಾಂಶ ಬರೆದು ವಿವರಣೆ ಬರೆದರೆ ಒಳ್ಳೆಯದು.
- ಮುಖ್ಯಾಂಶಗಳಿಗೆ ಪೆನ್ಸಿಲ್‌ನಿಂದ ಗೆರೆ ಎಳೆಯುವುದು ಒಳ್ಳೆಯ ಸ್ವಭಾವ.
- ಪರೀಕ್ಷೆಯ ಕೊನೆಯಲ್ಲಿ ಬರೆದಿರುವ ಉತ್ತರಗಳನ್ನು ಒಂದು

ಪುಟ 8 ಕ್ಕೆ ➤



# ಕಾದಿದ್ದಳು ಶಬರಿ ಶ್ರೀರಾಮನ ಮಂತ್ರಾಕ್ಷತೆಗಾಗಿ




**ಆರ್. ಸೀತಾಲಕ್ಷ್ಮಿ**
**ಮಾರ್ಗದರ್ಶಕರು,**
**ಕರ್ನಾಟಕ ರಾಜ್ಯ ಮಾಧ್ಯಮಿಕ**
**ಶಿಕ್ಷಕ ಸಂಘ**


ರಾಮಜನ್ಮಭೂಮಿಯ 550 ವರ್ಷಗಳ ಹೋರಾಟ, ತ್ಯಾಗ, ಹೋರಾಟ, ಬಲಿದಾನಗಳಿಗಾಗಿ ಕೊನೆಗೂ ಒಂದು ತಾರ್ಕಿಕ ಅಂತ್ಯ ಸರ್ವೋಚ್ಚ ನ್ಯಾಯಾಲಯದ ಮೂಲಕ ಬಂತು. ಸತ್ಯ ಮತ್ತು ನ್ಯಾಯ ಎರಡನ್ನೂ ಎತ್ತಿ ಹಿಡಿದ ಸರ್ವಾನುಮತದ ತೀರ್ಪು ಅದಾಗಿತ್ತು. ಇಡೀ ದೇಶ ಶ್ರೀರಾಮನ ಆಗಮನಕ್ಕಾಗಿ ಶಬರಿಯಂತೆ ಕಾಯುತ್ತಿತ್ತು. ಇಡೀ ಹಿಂದೂ ಸಮಾಜ ರಾಮಲಲ್ಲಾನ ಪ್ರಾಣ ಪ್ರತಿಷ್ಠಾಪನೆಯ ಮುಹೂರ್ತವನ್ನು ದೀಪಾವಳಿ ಹಬ್ಬವೆಂದು ಭಾವಿಸಿ ಸಂಭ್ರಮದಿಂದ ಆಚರಿಸಿತು. ಪ್ರತಿಷ್ಠಾಪನೆಯ ಅಂಗವಾಗಿ ನಡೆದ ಪೂರ್ವನಿಯೋಜಿತ ಕಾರ್ಯಕ್ರಮಗಳಲ್ಲಿ ಸಮಾಜದ ಪ್ರತಿ ಮನೆಯ ಸದಸ್ಯರನ್ನು 'ಮಂತ್ರಾಕ್ಷತೆ ಪೂರ್ವಕ' ಆಹ್ವಾನಿಸುವ ಅಭಿಯಾನವೂ ಒಂದು. ಇದಕ್ಕಾಗಿ ಕೆಲಸ ಮಾಡಿದ ರಾಮಭಕ್ತರಿಗೆ ಇದೊಂದು ಅಭೂತಪೂರ್ವ ಅನುಭವ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿಯುವ ಅಪೂರ್ವ ಸಂಗತಿ. "ಅಲ್ಲಿ ನೋಡಲು ರಾಮ, ಇಲ್ಲಿ ನೋಡಲು ರಾಮ ಎಲ್ಲೆಲ್ಲಿ ನೋಡಿದರೂ ಅಲ್ಲಿ ಶ್ರೀರಾಮ" ಎನ್ನುವ ದಾಸರ ದೇವರ ನಾಮ ಸಾಕ್ಷೀ ಭೂತವಾದ ಘಟನೆ ಈ ಮಂತ್ರಾಕ್ಷತಾ ಅಭಿಯಾನ!

ಡಿಸೆಂಬರ್ 24 ರಂದು ಬೆಂಗಳೂರಿನ ವಿದ್ಯಾಪೀಠನಗರದ ವಸತಿಗಳ ನಮ್ಮ ತಂಡ ಭಕ್ತಿ ಪೂರ್ವಕವಾಗಿ ಮಂತ್ರಾಕ್ಷತೆಯ ಕಲಶವನ್ನು ಮಂಗಳವಾದ್ಯದ ಸಮೇತ ಮೆರವಣಿಗೆಯಲ್ಲಿ ಸಂಗೀತ, ಸಂಕೀರ್ತನೆಯ ಮೂಲ ಹತ್ತಿರದ ಶ್ರೀರಾಮ ಮಂದಿರಕ್ಕೆ ತಂದೆವು. ಅಲ್ಲಿ ಶಾಸ್ತ್ರೋಕ್ತವಾಗಿ ಮಂತ್ರಾಕ್ಷತೆ ಕಲಶಕ್ಕೆ ಪೂಜೆಯನ್ನು ಸಲ್ಲಿಸಲಾಯಿತು.

ಮರುದಿನದಿಂದಲೇ ನಮ್ಮ ಬನಶಂಕರಿ ಎರಡನೇ ಘಟ್ಟದಲ್ಲಿರುವ ಶ್ರೀ ರಾಘವೇಂದ್ರಸ್ವಾಮಿಗಳ ಮಠದಲ್ಲಿ ಸೀತಾ ಸಮೇತ ರಾಮ ಲಕ್ಷ್ಮಣ ಹನುಮಂತರಿರುವ ಮುದ್ರಿತ ಕವರ್‌ಗಳಲ್ಲಿ ಮಂತ್ರಾಕ್ಷತೆಯನ್ನು ತುಂಬುವ ಕೆಲಸ ಪ್ರಾರಂಭವಾಯಿತು. ನಮ್ಮ ತಂಡದಲ್ಲಿದ್ದ 15 ರಿಂದ 20 ಜನ ಮಹಿಳೆಯರು ಮನೆ ಕೆಲಸದಿಂದ ಬಿಡುವು ಮಾಡಿಕೊಂಡು ಬಂದು ಜೈಶ್ರೀರಾಂ ಘೋಷಣೆಯನ್ನು ಕೂಗುತ್ತಾ ಕವರ್‌ಗಳಿಗೆ ತುಂಬಿದೆವು. ನಮ್ಮ ತಂಡದಲ್ಲಿ 80 ವರ್ಷದ ವೃದ್ಧರಿಂದ 16 ವರ್ಷದ ತರುಣಿಯರಿದ್ದುದು ಒಂದು ವಿಶೇಷ. ಆ ಸಮಯದಲ್ಲಿ ನಾವು ಪಟ್ಟ ಆನಂದ ಸಂಭ್ರಮ ವರ್ಣಿಸಲಾರೆ. ಈ ರೀತಿ ನಾವು ಅಕ್ಷತೆ ತುಂಬಿದವರ ಸಂಖ್ಯೆ ಸಾವಿರಾರು!

31.12.23 ರಂದಿನ ಬುಧವಾರದಿಂದ ಮಂತ್ರಾಕ್ಷತೆ ವಿತರಿಸುವ ನಮ್ಮ ಅಭಿಯಾನ ಪ್ರಾರಂಭವಾಯಿತು. ದಿನಾ ವಿವಿಧ ತಂಡಗಳು ಬೆಳಿಗ್ಗೆ 10 ಗಂಟೆಗೆ ಹೊರಟು ಮಧ್ಯಾಹ್ನ 2 ಗಂಟೆಯವರೆಗೆ ಮತ್ತು ಸಂಜೆ 4–30ರಿಂದ ರಾತ್ರಿ 8 ಗಂಟೆಯವರೆಗೆ ಮಂತ್ರಾಕ್ಷತೆ ಕವರ್, ರಾಮಮಂದಿರದ ಭಾವಚಿತ್ರ ಹಾಗೂ ಪ್ರತಿಷ್ಠಾನದ ಕರಪತ್ರವನ್ನು ಮನೆ ಮನೆಗೆ ತಲುಪಿಸುತ್ತಾ 22–1–24ರ ದಿನ ವಿಶೇಷ ದೀಪಾವಳಿ ಆಚರಿಸುವ ಬಗೆಯನ್ನು ತಿಳಿಸುತ್ತಾ ನಡೆದ ಕಾರ್ಯಕರ್ತರ ಅನುಭವವನ್ನು ಈ ಮೂಲಕ ತಿಳಿಸುತ್ತಿದ್ದೇನೆ.

ಶ್ರದ್ಧಾಭಕ್ತಿಯ ಈ ಮಂತ್ರಾಕ್ಷತಾ ಸ್ವೀಕರಣಾ ಘಟನೆ ಪ್ರತಿ ಮನೆಯಲ್ಲೂ ವಿಭಿನ್ನ. "ದಯವಿಟ್ಟು ಒಳಗೆ ಬನ್ನಿ, ನೀವು ಮಂತ್ರಾಕ್ಷತೆ ಕೊಡಲು ಬಂದಿರುವಿರಾ ತಾನೇ? ನಾವು ನಿಮಗೇ ಕಾಯುತ್ತಿದ್ದೆವು. ಶ್ರೀ ರಾಮನ ಕೃಪೆ, ನೀವು ಬಂದಿದ್ದೀರಿ. ಕಾಫಿನೋ, ಹಾಲೋ ಏನು ತೆಗೆದುಕೊಳ್ಳುವಿರಿ?" ಹೀಗೆ ಒಳ ಕರೆದು ಕೂರಿಸಿ ಉಪಚರಿಸಿದ ಮನೆಗಳು ಅದೆಷ್ಟೋ? ಈ ರೀತಿ ನಮಗೆ ಸ್ವಾಗತ ಸಿಗುತ್ತಿತ್ತು. ಒಂದೊಂದು ಮನೆಯಲ್ಲೂ ಅಕ್ಕರೆಯನ್ನು ಸ್ವೀಕರಿಸುವ ಪರಿ ವಿಭಿನ್ನವಾಗಿತ್ತು. ಆದರೆ ನಮಗೆ ಅದು ಆನಂದದಾಯಕ ಹಾಗೂ ಸ್ಫೂರ್ತಿದಾಯಕ.

ಒಂದು ರಸ್ತೆಗೆ ಪ್ರವೇಶಿಸಿದರೆ ನಮ್ಮ ತಂಡವನ್ನು 3–4 ಜನರ ಗುಂಪಾಗಿ ವಿಭಜಿಸಿಕೊಂಡು ಎದುರು ಬದರು ಮನೆಗಳಿಗೆ ಹೋಗುತ್ತಿದ್ದೆವು. ಕೆಲವೊಂದು ಮನೆಗಳಲ್ಲಿ "ಸುಮಂಗಲಿಯರು ಶ್ರೀರಾಮ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಕರೆಯಲು ಬಂದಿದ್ದೀರ. ಇದೊಂದು ಅಪರೂಪ ಭೇಟಿ, ನೀವು ಕೊಟ್ಟದ್ದನ್ನು ನಾವು ಸ್ವೀಕರಿಸಿದ್ದೇವೆ. ದಯವಿಟ್ಟು ಹಾಗೇ ಹೋಗಬೇಡಿ, ಕಡೆಯ ಪಕ್ಷ ಅರಿಶಿನ ಕುಂಕುಮ ಇಟ್ಟುಕೊಂಡು ಹೋಗಿ ಎನ್ನುತ್ತಿದ್ದರು". ಕುಂಕುಮದ ಜತೆ ಎಲೆ ಅಡಿಕೆ ಹಣ್ಣು ಕಾಯಿ ಜತೆಗೆ 50–100ರೂ ದಕ್ಷಿಣೆ ಬೇರೆ. ಕೆಲವೊಮ್ಮೆ ನಾವು 5 ಜನ ಮಹಿಳೆಯರಿದ್ದರೆ ಐವರಿಗೂ ಈ ಸೌಭಾಗ್ಯ ದೊರೆಯುತ್ತಿತ್ತು. ಕೆಲವು ಮನೆಗಳಲ್ಲಿ ಎಲೆ, ಅಡಿಕೆ ಜನತೆ ರವಿಕೆ ಕಣವನ್ನು ಇಟ್ಟು "ನಮ್ಮ ರಾಮ 500 ವರ್ಷದ ಜೈಲುವಾಸ ಮುಗಿಸಿ ಬಂದಿದ್ದಾನೆ. ನಾವು ಸಾಮೂಹಿಕವಾಗಿ ಪ್ರತಿಷ್ಠಾಪನೆ ನೋಡಲು ಬಂದೇ ಬರುತ್ತೇವೆ. ಇದಲ್ಲದೆ ನಮಗೆ ಮತ್ತೇನು ಸೌಭಾಗ್ಯ ಬೇಕು" ಎನ್ನುತ್ತಿದ್ದರು. ಒಬ್ಬರು ಮಹಿಳೆ "ನಾವು ನಮ್ಮ ಹಳ್ಳಿಯಲ್ಲಿ ರಾಮನ ದೇವಸ್ಥಾನ ಕಟ್ಟಿದ್ದೇವೆ. ಈಗ ರಾಮನ ಹುಟ್ಟೂರಿನಲ್ಲಿ ಅವನು ಹುಟ್ಟಿದ ಸ್ಥಳದಲ್ಲಿಯೇ

**ಪುಟ 6 ಕ್ಕೆ ➢**

➢ ಪುಟ 5 ರಿಂದ.....

ಮಂದಿರವಾಗಿದೆ ನಾವು ಈ ಸಂದರ್ಭವನ್ನು ಮಿಸ್ ಮಾಡಿಕೊಳ್ಳುತ್ತೇವೆಯೇ? ಎಂದರು.

ಬನಗಿರಿ ದೇವಸ್ಥಾನದ ಹಿಂಭಾಗದ ರಸ್ತೆಯಲ್ಲಿನ ಒಂದು ಮನೆ ಓರ್ವ 30–35 ರ ವಯಸ್ಸಿನ ಮಹಿಳೆ ಅಳು ಅಳುತ್ತಲೇ ನಮ್ಮನ್ನು ಸ್ವಾಗತಿಸಿ, ಆದರಿಸಿ, ಮಂತ್ರಾಕ್ಷತೆ ಸ್ವೀಕರಿಸಿ ಬೀಳ್ಕೊಟ್ಟಿದ್ದು ನಮ್ಮ ಕಣ್ಣಿನಲ್ಲೂ ಹನಿ ಉದುರಿಸಿತು. ಮತ್ತೊಂದು ಮನೆಯಲ್ಲಾದ ಅನುಭವ ನಮ್ಮ ಕಲ್ಪನೆಗೂ ಮೀರಿದ್ದು. ಬಾಗಿಲು ತಟ್ಟಿ ನಾವು ರಾಮಭಕ್ತರು ಮಂತ್ರಾಕ್ಷತೆ ಕೊಡಲು ಬಂದಿದ್ದೇವೆ ಎಂದಾಗ ಬಾಗಿಲು ತೆಗೆದು "ನೀವು ರಾಮಭಕ್ತರಲ್ಲ, ಸ್ವತಃ ಶ್ರೀರಾಮನೇ ಆಗಿದ್ದೀರಿ ಎಂದು ಮನೆಯ ಮುಂಬಾಗಿಲಿನಲ್ಲಿ ಮರದ ಮಣೆಯನ್ನು ಹಾಕಿ ನಮ್ಮನ್ನು ಅದರ ಮೇಲೆ ನಿಲ್ಲಿಸಿ ಪಾದಗಳನ್ನು ತೊಳೆದು ಪೂಜೆ ಮಾಡಿ, ಮಂತ್ರಾಕ್ಷತೆ, ರಾಮಮಂದಿರದ ಫೋಟೋ ಹಾಗೂ ಕರಪತ್ರಕ್ಕೆ ದೀಪಾರತಿ ಬೆಳಗಿ ನಂತರ ಒಳಿ ಕರೆದು ಕೂರಿಸಿ ವಿನಮ್ರ ಭಾವದಿಂದ ಮಂತ್ರಾಕ್ಷತೆ ಸ್ವೀಕರಿಸಿ ನಮ್ಮನ್ನು ಸತ್ಕರಿಸಿ ಬೀಳ್ಕೊಟ್ಟರು". ಅವರ ಭಕ್ತಿ ಶ್ರದ್ಧೆಗಳು ನಮ್ಮನ್ನು ಮೂಕವಿಸ್ಮಿತರನ್ನಾಗಿಸಿತು. ಅದೇ ಬಡಾವಣೆಯ ಒಂದು ಮನೆಯವರು "ನಾವು ಇನ್ನೂ ಸ್ನಾನ ಮಾಡಿಲ್ಲ, ದಯವಿಟ್ಟು ಅಕ್ಷತೆಯನ್ನು ದೇವರ ಮನೆಯಲ್ಲಿ ಇಟ್ಟು ಬಿಡುತ್ತೀರಾ? ಅನ್ಯಥಾ ಭಾವಿಸಬೇಡಿ" ಎಂದು ಸಂಕೋಚದಿಂದ ವಿನಂತಿಸಿಕೊಂಡದ್ದು, ಪರಮಾತ್ಮನ ಪ್ರಸಾದ ಸ್ವೀಕರಿಸುವಾಗ ಮೈಮನಗಳೆರಡೂ ಸ್ವಚ್ಛವಾಗಿರಬೇಕು ಎಂಬ ಹಿರಿಯರ ಮಾತನ್ನೂ ನೆನಪಿಸಿತು.

ಒಂದು ಮನೆಯ ಒಡತಿ, ಆರ್‌ಎಸ್‌ಎಸ್ ಪ್ರಚಾರಕರಾಗಿದ್ದ ದಿವಂಗತ ಉಪೇಂದ್ರ ಶೆಣೈರವರ ಸಂಬಂಧಿ ಮಂತ್ರಾಕ್ಷತೆ ನಮಗೆ ಇನ್ನೂ ತಲುಪಿಲ್ಲವಲ್ಲ ಎಂದು ಯೋಚನೆಯಾಗಿತ್ತು, ಸದ್ಯ ಬಂದಿರಲ್ಲ ಎಂದು ತಮ್ಮ ಹಾಗೂ ಆರ್‌ಎಸ್‌ಎಸ್‌ನ ಹಲವು ವರ್ಷಗಳ ಬಾಂಧವ್ಯದ ಬಗ್ಗೆ ಹೆಮ್ಮೆಯಿಂದ ಹೇಳಿ ನಮ್ಮನ್ನು ಪುರಸ್ಕರಿಸಿದರು.

ಅದೊಂದು ಭವ್ಯವಾದ ಬಂಗಲೆ, ಮನೆಯ ಒಳಗೆ ಹೋಗಬೇಕೊ ಬೇಡವೋ, ನಾಯಿಕಾಟ ಇರಬಹುದೇನೋ ಎಂದು ಯೋಚಿಸುತ್ತ ನಿಂತಿದ್ದಾಗ ಮನೆಯೊಡೆಯ ಮಹೇಂದ್ರ ವಿಠ್ಠಲ್ ಎನ್ನುವವರು ಒಳಗೆ ಕರೆದು ಅಕ್ಷತೆಯ ಕವರ್‌ಅನ್ನು ಸ್ವೀಕರಿಸಿ ಉಪಚರಿಸಿದುದಲ್ಲದೇ "ನೋಡೀ ನಾನು ಈ ಅಭಿಯಾನಕ್ಕೆ ಶ್ರೀರಾಮನ ಅಯೋಧ್ಯೆಯ ಮಂದಿರದ ಚಿತ್ರವಿರುವ 500 ಟೀ ಷರ್ಟ್‌ನ್ನು ದಾನ ಮಾಡಿದ್ದೇನೆ ಇದು ನನಗೆ ಧನ್ಯತಾಭಾವವನ್ನು ತಂದಿದೆ" ಎಂದರು.

ಕೆಲವೊಂದು ಫ್ಲಾಟ್‌ಗಳಲ್ಲಿ 30–40 ಮನೆಗಳಿದ್ದವು. ಎಲ್ಲರ ಮನೆಗಳಲ್ಲೂ ಶ್ರೀರಾಮನದೇ ಮಂತ್ರ. ಆದರದಿಂದ ಮಂತ್ರಾಕ್ಷತೆ ಸ್ವೀಕರಿಸಿ ಬೀಳ್ಕೊಟ್ಟರು. ನಮಗೆ ಒಟ್ಟಿಗೆ ಮನೆಗಳನ್ನು ಸುಲಭವಾಗಿ ಸಂಪರ್ಕಿಸುವಂತಾಯಿತಲ್ಲ ಎಂಬ ಸಂತೋಷ, ಸಮಯದ ಲಾಭ.

ಈ ಅಭಿಯಾನದ ನೆಪದಲ್ಲಿ ಅನೇಕರ ಮನೆಗಳಲ್ಲಿನ ದೇವರ ಮನೆ, ಅದರ ವಿನ್ಯಾಸ ಹಾಗೂ ಅಲಂಕರಿಸಿದ ರೀತಿಯನ್ನು ನೋಡುವ ಸೌಭಾಗ್ಯ ನಮ್ಮದಾಯಿತು. ಮಹಡಿ ಮನೆಗಳು ಇದ್ದ ಕಡೆಗಳಲ್ಲಂತೂ ಕೆಳ ಅಂತಸ್ತಿನ ಮನೆಯಲ್ಲಿ ನಾವು ಅಕ್ಷತೆಯನ್ನು ಕೊಡುತ್ತಿದ್ದುದನ್ನು ಕಂಡು ತಾವೇ ಕೆಳಗಿಳಿದು ಬಂದು ಸಂತೋಷದಿಂದ ಮಂತ್ರಾಕ್ಷತೆ ಸ್ವೀಕರಿಸುತ್ತಿದ್ದರು. ಮಾಧ್ಯಮಗಳು ಹಾಗೂ ವೃತ್ತ ಪತ್ರಿಕೆಗಳ ಮೂಲಕ ಈ ಮಂತ್ರಾಕ್ಷತಾ ಯಜ್ಞದ ಬಗ್ಗೆ ಎಲ್ಲರೂ ತಿಳಿದುಕೊಂಡಿದ್ದರಿಂದ ಅನೇಕ ಕಡೆ ನಾವು ವಿವರಣೆ ನೀಡುವುದು ತಪ್ಪಿತು. ನಮ್ಮ ಕೆಲಸ ಸುಲಭವಾಯಿತು. ನೂರಾರು ಮನೆಗಳನ್ನು ಸುತ್ತಿದ್ದರೂ ಈ ಅಭಿಯಾನ ನಮ್ಮ ಪಾಲಿಗೆ ಬಂದ ಭಗವಂತನ ಅನುಗ್ರಹ ಎಂದು ತಿಳಿದಿದ್ದರಿಂದ ನಮಗೆ ನಮ್ಮ ಕಾಲು ನೋವು, ಮಂಡಿನೋವುಗಳನ್ನು ಮರೆತೇ ಹೋಗುತ್ತಿದ್ದೆವು. ಅನೇಕ ಮನೆಗಳಲ್ಲಿ ನಮಗೆ "ಶ್ರೀರಾಮ ಕಾರ್ಯಕ್ಕಾಗಿ ನಮ್ಮ ಈ ದೇಣಿಗೆಯನ್ನು ಸ್ವೀಕರಿಸೀ ಎಂದು ಒತ್ತಾಯಿಸಿದರು. ಆದರೆ ದೇಣಿಗೆಯನ್ನು ಪಡೆಯಬಾರದೆಂದು ಆದೇಶವಿದ್ದಿತು. ನಾವು ಸವಿನಯವಾಗಿ ಅದನ್ನು ನಿರಾಕರಿಸುತ್ತಾ "ದಯಮಾಡಿ 22ನೇಯ ತಾರೀಖು ನಿಮ್ಮ ಮನೆಯ ಹತ್ತಿರದಲ್ಲಿರುವ ದೇವಸ್ಥಾನಕ್ಕೆ ಬನ್ನಿ, ಅಲ್ಲಿ ಸಾಮೂಹಿಕವಾಗಿ ಸೇರೋಣ, ರಾಮನ ಭಜನೆಯನ್ನು ಮಾಡೋಣ, ಶ್ರೀರಾಮನನ್ನು 'ಜೈ ಶ್ರೀರಾಮ್" ಎಂದು ಒಕ್ಕೊರಲಿನಿಂದ ಹಾಡಿ ಹೊಗಳಿ ಸಂಭ್ರಮಿಸಿ LED ಪರದೆಯ ಮೇಲೆ ಭಗವಂತನನ್ನು ಕಂಡು ಸ್ವರ್ಗಕ್ಕೆ ಕಿಚ್ಚು ಹಚ್ಚೋಣ, ಪ್ರಸಾದವನ್ನು ಸ್ವೀಕರಿಸೋಣ ಎಂದು ವಿನಂತಿಸಿಕೊಳ್ಳುತ್ತಿದ್ದೆವು".

ಕೆಲವು ಮನೆಗಳ ವಿನ್ಯಾಸವು ಆಧುನಿಕ ವೇಷ, ಭೂಷಣವೂ ಆಧುನಿಕ. ಅದರ ರೀತಿ ನೀತಿಗಳು ಆಧುನಿಕವೆಂಬಂತೆ ಕಂಡುಬಂದರೂ, ಅವರ ಅಂತರಾಳದಲ್ಲಿರುವ ಭಾರತೀಯ ಆಧ್ಯಾತ್ಮಿಕತೆ, ಭಾರತೀಯ ಅಸ್ಮಿತೆಯು ಅವರ ನಡೆನುಡಿಗಳಲ್ಲಿ ವ್ಯಕ್ತವಾಗುತ್ತಿತ್ತು. ಮಂತ್ರಾಕ್ಷತೆಯನ್ನು ಸ್ವೀಕರಿಸಲು ಇದ್ದ ಕಾತುರತೆ, ಅದರ ಬಗ್ಗೆ ಅವರಿಗಿದ್ದ ಶ್ರದ್ಧಾಭಕ್ತಿಗಳು ನಮ್ಮನ್ನು ಆಶ್ಚರ್ಯಚಕಿತಗೊಳಿಸಿತು. ಬರೀ ಹೊರನೋಟದಿಂದ ವ್ಯಕ್ತಿಯ ಗುಣ ಸ್ವಭಾವವನ್ನು ತಿಳಿಯುವುದು ತಪ್ಪು ಎನ್ನುವುದು ನಮಗೆ ಅರಿವಾಯಿತು.

ಒಂದು ವಿಶೇಷವೆಂದರೆ ಕೆಲವು ಕ್ರಿಶ್ಚಿಯನ್ ಮನೆಗಳಲ್ಲೂ, 3–4 ಮುಸಲ್ಮಾನರ ಮನೆಗಳಲ್ಲೂ ನಮ್ಮನ್ನು ಆದರಿಸಿದ್ದು. ಯಾವುದೇ ವಿರೋಧವಿಲ್ಲದೆ ಶಾಂತಚಿತ್ತದಿಂದ ನಮ್ಮ ವಿವರಣೆಯನ್ನು ಆಲಿಸಿ ಮಂತ್ರಾಕ್ಷತೆ ಹಾಗೂ ಕರಪತ್ರವನ್ನು ಪಡೆದರು. ಒಂದು ಮುಸ್ಲಿಂ ಮನೆಯಲ್ಲಂತೂ ಯಜಮಾನಿ ಅನಾರೋಗ್ಯದಿಂದ ಮಂಚದ ಮೇಲೆ ಮಲಗಿದ್ದರು. ಆದರೆ ಮನೆ ಕೆಲಸದಾಕೆ ಹೋಗಿ "ರಾಮನ ಕಡೆಯವರು ಬಂದಿದ್ದಾರೆ" ಎಂದು ಹೇಳಿದಾಗ ನಮ್ಮನ್ನು ಒಳ ಕರೆದು ನಮ್ಮ ಆಹ್ವಾನವನ್ನು ಸ್ವೀಕರಿಸಿ ಸಂತೋಷದಿಂದ ಬೀಳ್ಕೊಟ್ಟರು.

15 ದಿನಗಳ ಈ ಅಭಿಯಾನದಲ್ಲಿ ನಾವು ಸಂಪರ್ಕಿಸಿದ್ದು ನೂರಾರು ಮನೆಗಳನ್ನು. ಕೆಲವೇ ಕೆಲವರು ನಾಸ್ತಿಕರು ನಿರ್ಲಿಪ್ತವಾಗಿ ನಾವು ಇದರಲ್ಲಿ ಆಸಕ್ತರಲ್ಲವೆಂದು ತಿಳಿಸಿದರೆ, ಕೆಲವರಂತೂ ಮನೆಬಾಗಿಲನ್ನೇ ತೆರೆಯಲಿಲ್ಲ. ಈ ಸಂಖ್ಯೆ ಅತ್ಯಂತ ನಗಣ್ಯ. ಒಟ್ಟಾರೆ ಸಮಾಜದ ಎಲ್ಲ ಮುಖಗಳನ್ನೂ ಕಂಡ ಅನುಭವ ನಮ್ಮದಾಯಿತು.

ಅಭಿಯಾನದ ಕೊನೇ ದಿನ ನಮ್ಮ ತಂಡದವರು ದೇವ ಮಂದಿರದಲ್ಲಿ ಕೂತು ಅನು ದಿನದ ಅನುಭವ ಹಂಚಿಕೊಂಡಾಗ ಮನೆ ಮನೆಗಳಲ್ಲಿ ರಾಮನಿದ್ದಾನೆ, ಎಲ್ಲರ ಮನಸ್ಸಿನಲ್ಲೂ ರಾಮನಿದ್ದಾನೆ, ರಾಮನ ಆದರ್ಶವನ್ನು ನಾವು ಮೈತುಂಬಿಕೊಂಡು ಪಾಲನೆ ಮಾಡೋಣ. ಭಾರತದ ಸಂಸ್ಕೃತಿಯನ್ನು ಕಾಪಾಡಿಕೊಳ್ಳೋಣ" ಎಂಬ ಭಾವ ಎಲ್ಲರ ಮನಸ್ಸಿನಲ್ಲೂ ಜಾಗೃತಗೊಂಡಿದೆ. ಇನ್ನೂ ಶ್ರೀಕೃಷ್ಣನಿಗೂ ಭವ್ಯಮಂದಿರದಲ್ಲಿ ನೆಲೆಸುವ ದಿನಗಳೂ ದೂರವಿಲ್ಲ. ಆ ದಿನವನ್ನೂ ಕಾಣುವ ಭಾಗ್ಯ ನಮ್ಮ ಕಣ್ಣುಗಳಿಗೆ ಒದಗಲಿ ಎಂದು ನಮಗನ್ನಿಸಿದ್ದು. ಇದಕ್ಕೆ ನಮ್ಮ ಕಣ್ಣಿನಿಂದ ಸುರಿದ ಅಶ್ರುಧಾರೆಯೇ ಸಾಕ್ಷಿ.

**– ಜೈ ಶ್ರೀರಾಮ್ –** ●



# ರಾಮನ್ ಸಾಧನೆಯ ಪ್ರತೀಕ ರಾಷ್ಟ್ರೀಯ ವಿಜ್ಞಾನ ದಿನ

**ಶ್ರೀಪಾಲ ಸು. ಭೋಗಾರ**
**ಪ್ರಧಾನ ಕಾರ್ಯದರ್ಶಿಗಳು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಜಿಲ್ಲಾ ಘಟಕ ಕಲಬುರಗಿ**

ಪ್ರತಿ ವರ್ಷ ಫೆಬ್ರವರಿ 28 ರಂದು ಭಾರತ ದೇಶದೆಲ್ಲೆಡೆ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತದೆ. 28 ಫೆಬ್ರವರಿ 1928 ಇದೊಂದು ಭಾರತದ ವೈಜ್ಞಾನಿಕ ಇತಿಹಾಸದಲ್ಲಿ ಹೊಸ ಮೈಲಿಗಲ್ಲು ನಿರ್ಮಿಸಿದ ದಿನ. ವೈಜ್ಞಾನಿಕ ಕ್ಷೇತ್ರದಲ್ಲಿ ಭಾರತೀಯರು ಇತರರಿಗೆ ಕಡಿಮೆ ಇಲ್ಲ ಎಂದು ಇಡೀ ವಿಶ್ವಕ್ಕೆ ಸಾರಿ ಸಾರಿ ಹೇಳಿದ ದಿನ. 96 ವರ್ಷಗಳ ಹಿಂದೆ ಭಾರತದ ವಿಜ್ಞಾನಿ ಸಿ.ವಿ. ರಾಮನ್‌ರು ತಮ್ಮ ಜ್ಞಾನ ದಾಹ ಹಾಗೂ ನಿರಂತರ ಸಂಶೋಧನೆಯ ಫಲವಾಗಿ 'ರಾಮನ್ ಪರಿಣಾಮ' ಎಂಬ ಸಂಶೋಧನಾ ಪ್ರಬಂಧವನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜು ಆವರಣದಲ್ಲಿ ಮೊಟ್ಟಮೊದಲು ಪ್ರತಿಪಾದಿಸಿದ ಮಹತ್ವದ ದಿನ ಇದು. ಈ ಅಪರೂಪದ ಘಟನೆಯ ಸ್ಮರಣೆಗಾಗಿ ಫೆಬ್ರವರಿ–28ನ್ನು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸಲಾಗುತ್ತದೆ.

ಈ ಸಂಶೋಧನಾ ಪ್ರಬಂಧಕ್ಕಾಗಿ ಸಿ.ವಿ.ರಾಮನ್ ಅವರಿಗೆ 1929 ರಲ್ಲಿ ನೈಟ್ ಹುಡ್ ಪುರಸ್ಕಾರ ಮತ್ತು 1930 ರಲ್ಲಿ ಭೌತಶಾಸ್ತ್ರದ ವಿಭಾಗದಲ್ಲಿ ನೊಬೆಲ್ ಪ್ರಶಸ್ತಿ ದೊರೆಯಿತು.

ಸಿ.ವಿ. ರಾಮನ್‌ರು 1888 ನವ್ಹೆಂಬರ್ 7 ರಂದು ಇಂದಿನ ತಮಿಳುನಾಡಿನ ತಿರುಚನಾಪಳ್ಳಿ ಎಂಬಲ್ಲಿ ಚಂದ್ರಶೇಖರ ಅಯ್ಯರ್ ಹಾಗೂ ಪಾರ್ವತಿ ಅಮ್ಮಾಳ್ ಅವರಿಗೆ 8 ಜನ ಮಕ್ಕಳಲ್ಲಿ ದ್ವಿತೀಯ ಪುತ್ರನಾಗಿ ಜನಸಿದರು. ಅವರ ಪೂರ್ಣ ಹೆಸರು ಚಂದ್ರಶೇಖರ ಅಯ್ಯರ ವೆಂಕಟ ರಾಮನ್. ಅವರ ತಂದೆ ಕೌಟುಂಬಿಕ ಒತ್ತಡದಲ್ಲೂ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದರು. ಬಾಲ್ಯದಿಂದಲೂ ಕುಶಲಮತಿಯಾದ ವೆಂಕಟ ರಾಮನ್ ಪ್ರೌಢ ಮತ್ತು ಇಂಟರ್ ಮಿಡಿಯಟ್ ಶಿಕ್ಷಣವನ್ನು ವಿಶಾಖಪಟ್ಟಣದಲ್ಲಿ ಮುಗಿಸಿದರು.

ರಾಮನ್‌ರ ಪ್ರತಿಭೆಯನ್ನು ಗುರುತಿಸಿದ ಅವರ ಗುರುಗಳು, ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಲು ಅವರ ತಂದೆಗೆ ಸಲಹೆ ನೀಡಿದರು. ಅದರಂತೆ ಅವರು ವಿದೇಶಕ್ಕೆ ತೆರಳಲು ಮುಂದಾದಾಗ ಅವರ ಆರೋಗ್ಯವನ್ನು ಪರೀಕ್ಷಿಸಿದ ವೈದ್ಯರು ರಾಮನ್‌ರ ಪ್ರಕೃತಿ ವಿದೇಶ ಪ್ರಯಾಣಕ್ಕೆ ಸರಿಹೊಂದುವುದಿಲ್ಲವೆಂದು ಕಾರಣ ಹೇಳಿದರು. ಇದರಿಂದ ಅವರ ಇಂಗ್ಲೆಂಡ್ ಪ್ರವಾಸ ರದ್ದಾಯಿತು. ಕೊನೆಗೆ ಅವರು ಮದ್ರಾಸ್ ವಿಶ್ವವಿದ್ಯಾಲಯದಿಂದಲೇ 1907ರಲ್ಲಿ ಎಮ್.ಎ. ಪದವಿ ಪಡೆದು ಹೊರಬಂದರು. ಎಫ್.ಸಿ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬರ್ಮಾ ದೇಶದಲ್ಲಿ ಹಣಕಾಸು ಇಲಾಖೆಯ ಅಧಿಕಾರಿಗಳಾಗಿ ವೃತ್ತಿ ಆರಂಭಿಸಿದರು. ಆದರೂ ಭೌತಶಾಸ್ತ್ರದ ಮೇಲಿನ ಅವರ ಪ್ರೀತಿ ಮತ್ತು ಆಸಕ್ತಿ ಕಡಿಮೆಯಾಗಲಿಲ್ಲ. ಹೀಗಾಗಿ ಅವರು ಆ ವೃತ್ತಿಯನ್ನು ತ್ಯಜಿಸಿ ಕೋಲ್ಕತ್ತಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದರು.. ಅಲ್ಲಿ ಅವರು ಬೆಳಕು, ಕ್ಷ–ಕಿರಣ, ಕಾಂತತ್ವ, ಸ್ಪಟಿಕಗಳು ಮುಂತಾದ ವಿಷಯಗಳನ್ನು ಸಂಶೋಧನೆಗೆ ಆರಿಸಿಕೊಂಡರು. 1921ರಲ್ಲಿ ಇಂಗ್ಲೆಂಡ್‌ನಲ್ಲಿ ಜರುಗಿದ ವಿಜ್ಞಾನ ಸಮ್ಮೇಳನದಲ್ಲಿ ಭಾಗವಹಿಸುವ ಭಾಗ್ಯ ಒದಗಿಬಂತು. ಅದರಿಂದ ಪ್ರಚೋದನೆಗೊಂಡ ಅವರು ನಂತರ ಹಲವಾರು ವಿಷಯಗಳ ಕುರಿತು ಸಂಶೋಧನೆಗಳನ್ನು ನಡೆಸಿ ಪ್ರಬಂಧವನ್ನು ಮಂಡಿಸಿದರು.

ಸಿ.ವಿ. ರಾಮನ್‌ರು ಮಂಡಿಸಿರುವ ಭೌತಶಾಸ್ತ್ರಕ್ಕೆ ಸಂಬಂದಿಸಿದ ಅನೇಕ ಪ್ರಬಂಧಗಳಿಗೆ ಪ್ರಶಸ್ತಿಗಳು ಲಭಿಸಿವೆ. ಪ್ರಮುಖವಾಗಿ ಲಂಡನ್ ರಾಯಲ್ ಸೊಸೈಟಿ ಪದಕ, ಲೆನಿನ್ ಶಾಂತಿ ಪ್ರಶಸ್ತಿ, ಪ್ಯಾರಿಸ್ ವಿಶ್ವ ವಿದ್ಯಾಲಯದ ಎಸ್.ಸಿ.ಡಿ. ಪದವಿ ಮತ್ತು ಮೈಸೂರು, ಲಖನೌ, ದೆಹಲಿ, ಕಾನ್ಪುರ ವಿ.ವಿ.ಗಳಿಂದ ಗೌರವ ಡಾಕ್ಟರೇಟ್ ಮತ್ತು ಬ್ರಿಟಿಷ್ ಸರಕಾರವು 'ಸರ್' ಪದವಿ ನೀಡಿ ಗೌರವಿಸಿತು.

1954ರಲ್ಲಿ ಭಾರತ ಸರಕಾರವು ಸರ್. ಸಿ.ವಿ. ರಾಮನ್‌ರಿಗೆ ದೇಶದ ಅತ್ತ್ಯುನ್ನತ ಪ್ರಶಸ್ತಿಯಾದ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಿತು. ಅವರು ತಮ್ಮ ವಯೋಸಹಜ ಕಾರಣಗಳಿಂದ 1970 ನವ್ಹೆಂಬರ್ 21 ರಂದು ಸ್ವರ್ಗವಾಸಿಗಳಾದರು. ನಮ್ಮ ದೇಶಕ್ಕೆ ಅವರು ನೀಡಿದ ಕೊಡುಗೆ ನಮ್ಮ ಯುವ ಜನಾಂಗಕ್ಕೆ ಒಂದು ಮಾದರಿ. ಅಂತಹ ಮಹಾನ್ ವಿಜ್ಞಾನಿಯ ಹೆಸರಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸುತ್ತಿರುವದು ನಮ್ಮೆಲ್ಲರ ಸುದೈವವೇ ಸರಿ.

●

**ನಮ್ಮ ಸಾಧನೆಗೆ ಎಲ್ಲಾ ರೀತಿಯಲ್ಲೂ ಸೂಕ್ತ ಮತ್ತು ಸಮರ್ಪಕವಾದ ಸಮಯಕ್ಕೆ ಕಾದರೆ, ಆ ಸಮಯ ಎಂದೂ ಬಾರದೇ ಇರಬಹುದು. ಸಿಕ್ಕ ಅವಕಾಶವನ್ನು ಸೂಕ್ತವಾಗಿ ಉಪಯೋಗಿಸಿಕೊಂಡು ನಮ್ಮ ಶಕ್ತಿ ಹಾಗೂ ಸಾಮರ್ಥ್ಯಕ್ಕನುಗುಣವಾಗಿ ಏನನ್ನಾದರೂ ಸಾಧಿಸಬೇಕು.**

➢ ಪುಟ 3 ರಿಂದ.....

ದೇಶದೊಳಗಿರುವವರಷ್ಟೇ ಅಲ್ಲ ಜಗತ್ತಿನಾದ್ಯಂತ ಕಾಣಿಕೆಗಳ ಮಹಾಪೂರವೇ ಹರಿದು ಬರುತ್ತಿರುವುದನ್ನು ಕಂಡಾಗ ನಿಜವಾಗಿಯೂ ಇದು 'ನಭೋತೋ ನ ಭವಿಷ್ಯತಿ' ಎಂಬ ಉದ್ಗಾರವನ್ನು ಎಲ್ಲರಿಂದ ಹೊರಡಿಸದೇ ಇರದು.

ಹೀಗೆ ದೇಶದ ಎಲ್ಲ ಕಡೆಗಳಿಂದ ಒಮ್ಮತದಲ್ಲಿ ಒಂದೆಡೆಯಲ್ಲಿ ಒಂದೇ ಗುರಿಯೊಂದಿಗೆ, ಒಂದೇ ಭಾವದೊಂದಿಗೆ ಸೇರುವಂತೆ ಅವರೆಲ್ಲರಲ್ಲಿ ಐಕ್ಯತೆಯನ್ನು ಮೂಡಿಸಿರುವುದೇ 'ಅಯೋಧ್ಯೆಯ ರಾಮಮಂದಿರ' ರಾಮರಾಜ್ಯದಲ್ಲಿ ನ್ಯಾಯ, ನೀತಿ, ಧರ್ಮವು ಸಂಪೂರ್ಣವಾಗಿ ನೆಲೆಸಿತ್ತಂತೆ. ಸಮಾಜವು ಸುಭಿಕ್ಷವಾಗಿತ್ತಂತೆ, ಯಾರೊಬ್ಬರೂ ಮತ್ತೊಬ್ಬರನ್ನು ಕಂಡರೆ ಅಸೂಯೆ ಪಡುವುದನ್ನಾಗಲೀ, ದ್ವೇಷಿಸುವುದನ್ನಾಗಲೀ ಕನಸಿನಲ್ಲಯೂ ಯೋಚಿಸುತ್ತಿರಲಿಲ್ಲವಂತೆ. ರಾಜ ರಾಮನ ಆಡಳಿತವು ಅಷ್ಟು ದಕ್ಷತೆಯಿಂದ ನಡೆಯುತ್ತಿತ್ತಂತೆ, ಅದಕ್ಕೇ 'ರಾಮರಾಜ್ಯವನ್ನು ಮತ್ತೆ ತರಬೇಕೆಂಬುದು ಎಲ್ಲರ ಕನಸಾಗಿತ್ತು. ಅದಕ್ಕೆ ಅಗತ್ಯವಾದದ್ದು ಜನರಲ್ಲಿ ಪರಸ್ಪರ ಸೌಹಾರ್ದದ ಮನೋಭಾವ, ಸಹಬಾಳ್ವೆಯತ್ತ ಒಲವು, ಸ್ವಾರ್ಥ ದೂರವಾದ ನಡವಳಿಕೆ, ಮಾನವ ಧರ್ಮದ ಅರಿವು, ಈ ಎಲ್ಲ ಮೌಲ್ಯಗಳನ್ನು ಜನರಲ್ಲಿ ಮೂಡಿಸಿ, ರಾಮರಾಜ್ಯದ, ಧರ್ಮರಾಜ್ಯದ ಅಖಂಡ ಹಿಂದೂ ಸಾಮ್ರಾಜ್ಯದ ಪುನರ್ ಸ್ಥಾಪನೆಯನ್ನು ಮಾಡುವಲ್ಲಿ ರಾಮಮಂದಿರದ ನಿರ್ಮಾಣವು ಮಾರ್ಗದರ್ಶಕವಾಗುವುದು ಖಂಡಿತ. ಅದರ ಲಕ್ಷಣಗಳು ಈಗಾಗಲೇ ಕಾಣುತ್ತಿವೆ. ●

# ಭರವಸೆಯ ಬೆಳಕು

ಓ, ಮಗುವೇ ಹತ್ತರ ಭಯ ಹತ್ತಿರ ಬೇಡ
ನೀನು ಆಕಾಶದೆತ್ತರಕೆ ಹಾರುವುದು ಮರಿಬೇಡ
ವಿದ್ಯೆಗೆ ವಿನಯವೇ ಭೂಷಣ
ಶಿಕ್ಷಣದಿಂದಲೇ ಜೀವನದ ನಿಜದರ್ಶನ

ವಿದ್ಯಾರ್ಥಿಗಳೇ ಸಾಧ್ಯವೆಂದರೆ ಸಾಧ್ಯ
ಅಸಾಧ್ಯವೆಂದರೆ ಅಸಾಧ್ಯ
ನೀವು ಏನು ಅಂದುಕೊಳ್ಳುವಿರಿ
ನಿಜವಾಗಲೂ ಅದೇ ಆಗುವಿರಿ

ಬದುಕಿನಲ್ಲಿ ನೋವಿದ್ದರೆ ಇಂದು
ನಲಿವಿರುವುದು ಎಂದೆಂದು
ಎಂದೆಂದೂ ಬಿಡದಿರಿ ನ್ಯಾಯ ನೀತಿ
ಕಾಡದಿರಲಿ ನಿಮಗೆ ಭಯ ಭೀತಿ

ಸಮಾನವಾಗಿ ಸ್ವೀಕರಿಸಿ ಸೋಲು ಗೆಲುವು
ಬಾಳಿನಲಿ ಎಲ್ಲರಿಗುಂಟು ನೋವು ನಲಿವು
ಬದುಕಿನಲ್ಲಿರಲಿ ಚೈತನ್ಯ ಸ್ಫೂರ್ತಿ
ಎಲ್ಲೆಡೆಯೂ ಹರಡಲಿ ನಿಮ್ಮಯ ಕೀರ್ತಿ

ಹಿಡಿತದಲ್ಲಿರಲಿ ನಿಮ್ಮ ಮನಸ್ಸು
ಕಡಿಮೆಯಾಗಲಿ ಮನದ ಮುನಿಸು
ನನಸಾಗಲಿ ನಿಮ್ಮಯ ಕನಸು
ಬೇಗ ದೊರೆಯಲಿ ನಿಮಗೆ ಯಶಸ್ಸು

– ಶರಣು ಎಂ.ಪಿ, ಆಂಗ್ಲ ಭಾಷಾ ಶಿಕ್ಷಕರು
ಸರಕಾರಿ ಪ್ರೌಢಶಾಲೆ, ಗೋಕಾಕ(ಬಿ), ಕಲಬುರ್ಗಿ ಜಿ

➢ ಪುಟ 4 ರಿಂದ.....

ಬಾರಿ ನೋಡಬೇಕು ಮತ್ತು ಎಲ್ಲ ಪ್ರಶ್ನೆಗಳಿಗೆ ಉತ್ತರ ಬರೆದಿರುವಿರಾ ಎಂದು ಖಚಿತಪಡಿಸಿಕೊಳ್ಳಬೇಕು. ಉತ್ತರಕ್ಕೆ ಹಾಕಿರುವ ಪ್ರಶ್ನೆಗಳ ಸಂಖ್ಯೆಯನ್ನು ಪರೀಕ್ಷಿಸಿಕೊಳ್ಳಬೇಕು. ಅದಕ್ಕಾಗಿ ಕೊನೆಯಲ್ಲಿ 10 ರಿಂದ 15 ನಿಮಿಷ ಈ ಮೇಲಿನ ಕಾರ್ಯಗಳಿಗಾಗಿ ಸಮಯ ಮೀಸಲಿಡಬೇಕು.

- ಹೆಚ್ಚುವರಿ ಉತ್ತರ ಬರೆಯುವ ಶೀಟ್ ತೆಗೆದುಕೊಂಡಲ್ಲಿ ಮುಖ್ಯ ಪೇಪರಿಗೆ ಸಾಕಷ್ಟು ಮುಂಚಿತವಾಗಿ ಸರಿಯಾಗಿ ನಿಮ್ಮ ನಂಬರ್ ಹಾಕಿರುವ ಬಗ್ಗೆ ಖಚಿತ ಪಡಿಸಿಕೊಂಡು ಜೋಡಿಸಬೇಕು.

ಈ ಎಲ್ಲ ಪ್ರಯತ್ನಗಳನ್ನು ಮಾಡಿದರೆ ಯಶಸ್ಸು ಖಂಡಿತ ನಿಮ್ಮದಾಗುತ್ತದೆ. ಆದರೆ ಪ್ರಯತ್ನ ಮಾಡಲಾಗಿ ಪರೀಕ್ಷೆಯಲ್ಲಿ ಫೇಲ್ ಆದರೆ ಒಂದಂತು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ನಮ್ಮ ಜೀವನಕ್ಕೆ ಈ ಪರೀಕ್ಷೆಯೇ ಅಂತಿಮವಲ್ಲ. ಗುರಿ ಮುಟ್ಟುವಲ್ಲಿ ಸೋಲಾಗಲಿಲ್ಲ. ಅಬ್ರಾಹಂ ಲಿಂಕನ್‌ರನ್ನು ನೆನಪಿಸಿಕೊಳ್ಳಬೇಕು. ಗುರಿಮುಟ್ಟುವಲ್ಲಿ ಸೋಲಿಗೆ ಹೆದರಬಾರದು. ಮುಂದಿನ ಪ್ರಯತ್ನದಲ್ಲಿ ಸೋಲು ನಮ್ಮನ್ನು ನೋಡಿ ಹೆದರಬೇಕು. ನಿರಂತರ ಪ್ರಯತ್ನವೇ ಯಶಸ್ಸು ಗಳಿಸಲು ಇರುವ ಮಾರ್ಗ.

ಇಂದು ಶಿಕ್ಷಕರು, ವಿದ್ಯಾರ್ಥಿಗಳು, ಎದುರಿಸುವ ಪರೀಕ್ಷೆಯ ತಯಾರಿಯಲ್ಲಿ 'ಯುದ್ಧದ ತಯಾರಿಯ' ತರಹ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ತಾವು ನೆಟ್ಟ ಮರ ತಮ್ಮ ಮುಂದೆ ಹೆಮ್ಮರವಾಗಿ ಬೆಳೆಯುವುದನ್ನು ಶಿಕ್ಷಕರು ಬಯಸುತ್ತಾರೆ. ಅದಕ್ಕಾಗಿ ವಿಶೇಷ ತರಗತಿಗಳನ್ನು ಮಾಡುವುದು. ವಿದ್ಯಾರ್ಥಿಗಳ ಮನೆ ಭೇಟಿ, ವಿದ್ಯಾರ್ಥಿಗಳು ಬೆಳಿಗ್ಗೆ ಬೇಗ ಏಳಲು ಫೋನ್ ಮಾಡುವುದು. ಸಂದೇಶ ಕಳುಹಿಸುವುದು, ದಿನದ ಹೆಚ್ಚಿನ ಸಮಯವನ್ನು ಪರೀಕ್ಷಾ ತಯಾರಿಯಲ್ಲಿ ಕಳೆಯುತ್ತಿದ್ದಾರೆ. ತಮ್ಮ ಮೊಬೈಲ್‌ನಲ್ಲಿ ವಿಷಯಕ್ಕೆ ಅನುಗುಣವಾಗಿ ಗುಂಪುಗಳನ್ನು ಮಾಡಿಕೊಂಡು ರಾಜ್ಯದ ಬೇರೆ ಬೇರೆ ಭಾಗದಲ್ಲಿಯ ಪಠ್ಯದ ಅಂಶಗಳನ್ನು ತರಿಸಿಕೊಂಡು ತಮ್ಮ ವಿದ್ಯಾರ್ಥಿಗಾಗಿ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಅಳವಡಿಸಿಕೊಳ್ಳುತ್ತಿದ್ದಾರೆ. ಪರೀಕ್ಷೆಗಳು ಹತ್ತಿರಕ್ಕೆ ಬಂದಂತೆ ತಮ್ಮ ಸ್ವಂತ ಕಾರ್ಯಗಳನ್ನು ಮುಂದಕ್ಕೆ ಹಾಕಿ ತಮ್ಮ ವಿದ್ಯಾರ್ಥಿಗಳ ಪರೀಕ್ಷಾ ತಯಾರಿಗಾಗಿ ಶ್ರಮಿಸುತ್ತಿದ್ದಾರೆ.

ಶಿಕ್ಷಕರು ತಮಗಿರುವ ಅನುಭವದ ಆಧಾರದ ಮೇಲೆ ಅನೇಕ ರಚನಾತ್ಮಕ ಕಾರ್ಯಗಳನ್ನು ಪರೀಕ್ಷೆಗೆ ಸಹಾಯವಾಗಲಿ ಎಂದು ಮಾಡುತ್ತಿರುವರು. ಇದರ ಜೊತೆಯಲ್ಲಿ ಶಿಕ್ಷಣ ಇಲಾಖೆಯು ಪರೀಕ್ಷಾ ತಯಾರಿಗೆ ಪೂರಕವಾಗಿ ಅನೇಕ ಸಂಘ ಸಂಸ್ಥೆಗಳ ನೆರವಿನೊಂದಿಗೆ ಕಾರ್ಯಯೋಜನೆಯನ್ನು ಹಾಕಿಕೊಂಡು ಪ್ರಯತ್ನಿಸುತ್ತಿದೆ. ಶಿಕ್ಷಣ ಇಲಾಖೆಯ ಅನೇಕ ಸಕ್ರಿಯ ಅಧಿಕಾರಿಗಳು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಪರೀಕ್ಷಾ ತಯಾರಿಕೆಯಲ್ಲಿ ನೆರವಾಗುತ್ತಿದ್ದಾರೆ. ಪಾಲಕರು ತಮ್ಮದೇ ಆದ ಸಾಮರ್ಥ್ಯಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕಲಿಸಿಕೊಡುತ್ತಿದ್ದಾರೆ.

ಈ ಶೈಕ್ಷಣಿಕ ಸುಗ್ಗಿಯ ಸಂದರ್ಭದಲ್ಲಿ ನೆರವಾಗುತ್ತಿರುವ ಎಲ್ಲರನ್ನು ಗೌರವ ಪೂರಕವಾಗಿ ಸ್ಮರಿಸಬೇಕಾಗಿದೆ. ಓದುಗರಾದ ನಾವು ಸಹ ನಮ್ಮಿಂದ ಆಗಬಹುದಾದ ಸಹಾಯವನ್ನು ಮಾಡುವುದರ ಜೊತೆಗೆ ಶುಭವಾಗಲಿ ಎಂದು ತಾವುಗಳು ಹಾರೈಸಬಹುದಲ್ಲವೆ? ●

# ಬೆಂಗಳೂರು ಉತ್ತರ ಜಿಲ್ಲೆಯ ಪದಾಧಿಕಾರಿಗಳ ಪ್ರವಾಸ

03–02–2024ರ ಶನಿವಾರ ಮಧ್ಯಾಹ್ನ 12–30 ಗಂಟೆಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಲಯ ಪ್ರಮುಖರಾದ ಶ್ರೀ ಜೆ.ಎಂ ಜೋಷಿರವರ ಮಾರ್ಗದರ್ಶನದಲ್ಲಿ ಬೆಂಗಳೂರು ಉತ್ತರ ಜಿಲ್ಲೆ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಜಿ ಕೂಡಗಿರವರ ನೇತೃತ್ವದಲ್ಲಿ ಕರ್ನಾಟಕದ ಕಾಶ್ಮೀರ ಕೊಡಗು ಜಿಲ್ಲೆಗೆ ಪ್ರವಾಸವನ್ನು ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕಾರ್ಯಾಲಯ ಯಾದವಸ್ಮೃತಿಯಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಪದಾಧಿಕಾರಿಗಳು ಸೇರಿ ಅಲ್ಲಿಂದ ಮಡಿಕೇರಿ, ಬೈಲುಕುಪ್ಪೆಯ ಗೋಲ್ಡನ್ ಟೆಂಪಲ್ ಕಡೆಗೆ ಪ್ರಯಾಣ ಬೆಳೆಸಿದೆವು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರವಲಯ –3 ರ ಅಧ್ಯಕ್ಷರಾದ ಶ್ರೀ ಗಂಗಾಧರ.ಎಂ.ವಿರವರು ಪ್ರವಾಸದ ಉದ್ದೇಶ ಎಲ್ಲಾ ಕಾರ್ಯಕರ್ತರು ಒಂದೆಡೆ ಸೇರಿ, ಕಲೆತು, ಬೆರೆತು ಒಟ್ಟಿಗೆ ಪ್ರಯಾಣಿಸಿ ತಮ್ಮ ಬಾಂಧವ್ಯವನ್ನು ವೃದ್ಧಿಸಿಕೊಂಡು ಮುಂದಿನ ದಿನಗಳಲ್ಲಿ ಶಿಕ್ಷಕ ಸಂಘದ ಉನ್ನತಿಗೆ ಶ್ರಮಿಸಬೇಕೆಂದು ತಿಳಿಸಿ ಪ್ರವಾಸದಲ್ಲಿ ಭಾಗಿಯಾಗಿರುವ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯಕ್ರಮದ ಎರಡೂ ದಿನಗಳ ಮಾಹಿತಿ ಹಾಗೂ ರೂಪುರೇಷೆಯನ್ನು ವಿಭಾಗ ಪ್ರಮುಖರಾದ ಶ್ರೀ ಗಂಗಪ್ಪರವರು ತಿಳಿಸಿದರು. ಸಹಲ್ ಕಾರ್ಯಕ್ರಮದ ಮುಖ್ಯ ಉದ್ದೇಶ ಮತ್ತು ಕಾರ್ಯಕರ್ತರು ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು ಮತ್ತು ಪದಾಧಿಕಾರಿಗಳ ಜವಾಬ್ದಾರಿಗಳನ್ನು ಕಾರ್ಯಾಲಯ ಪ್ರಮುಖರಾದ ಶ್ರೀ ಜೆಎಂ ಜೋಷಿರವರು ನೀಡಿದರು. ಸಂಜೆ 5–30 ನಿಮಿಷಕ್ಕೆ ಬೈಲುಕುಪ್ಪೆಯ ಗೋಲ್ಡನ್ ಟೆಂಪಲ್ ಸೇರಿದೆವು. ಟಿಬೆಟಿಯನ್ನರ ಧರ್ಮ ಗುರುಗಳಾದ ಶ್ರೀಯುತ ದಲೈಲಾಮರವರ ಮಾರ್ಗದರ್ಶನದಲ್ಲಿ ನಿರ್ಮಿತವಾದ ಮಂದಿರವು ಭವ್ಯವಾಗಿದೆ, ರಮಣೀಯವಾಗಿ ಪ್ರವಾಸಿಗರನ್ನು ಆಕರ್ಷಿಸುವ ಸ್ಥಳವಾಗಿದೆ. ಈ ಸುಂದರವಾದ ಸ್ಥಳದ ಸೊಬಗನ್ನು ಸವಿದು ಎಲ್ಲಾ ಪದಾಧಿಕಾರಿಗಳು ಅಲ್ಲಿಂದ ಕುಶಾಲನಗರದಲ್ಲಿ ಚಹಾ ಸೇವಿಸಿ ಮಡಿಕೇರಿಯತ್ತ ಪ್ರಯಾಣ ಬೆಳೆಸಿದೆವು. ಪ್ರಯಾಣದ ಅವಧಿಯಲ್ಲಿ ಪದಾಧಿಕಾರಿಗಳು ತಮ್ಮದೇ ಆದ ಹಾಸ್ಯಭರಿತ ಮಾತುಗಳಿಂದ ಯಾರಿಗೂ ಪ್ರಯಾಣದ ಆಯಾಸವಿಲ್ಲದೆ ರಾತ್ರಿ 8–00 ಗಂಟೆಗೆ ಮಡಿಕೇರಿ ತಲುಪಿದೆವು.

ಮಡಿಕೇರಿಯ ಹೃದಯ ಭಾಗದಲ್ಲಿರುವ ಪಾಕಶಾಲಾ ಹೋಟೆಲ್‌ನಲ್ಲಿ ರಾತ್ರಿಯ ಊಟದ ಸವಿಯನ್ನು ಉಂಡು ವಸತಿಗೃಹಕ್ಕೆ ತೆರಳಿದೆವು. ವಸತಿಗೃಹದ ವ್ಯವಸ್ಥೆಯನ್ನು ಮಾಡಿದ ನಮ್ಮ ವಿಭಾಗ ಪ್ರಮುಖರಾದ ಶ್ರೀ ಗಂಗಪ್ಪನವರ ಸಹೋದರಿಯ ಮನೆಗೆ ಭೇಟಿ ನೀಡಿ ಅವರ ಆತಿಥ್ಯವನ್ನು ಸ್ವೀಕರಿಸಿ ಅವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಧನ್ಯವಾದಗಳನ್ನು ಅರ್ಪಿಸಲಾಯಿತು.

04–02–2024ರ ಭಾನುವಾರ ಬೆಳಿಗ್ಗೆ 6–00 ಗಂಟೆಗೆ ಪ್ರಯಾಣ ಆರಂಭಿಸಿ ಓಂಕಾರೇಶ್ವರ ದೇವಾಲಯವನ್ನು ಸಂದರ್ಶಿಸಿ ಸ್ವಾಮಿ ಆಶೀರ್ವಾದ ಪಡೆಯಲಾಯಿತು. ಅಲ್ಲಿಂದ ಮಡಿಕೇರಿಯ ಪ್ರಸಿದ್ಧ ಪ್ರವಾಸಿ ತಾಣ ರಾಜಾಸೀಟ್ ನೋಡಲಾಯಿತು. ಅಲ್ಲಿನ ಪ್ರಕೃತಿ ರಮಣೀಯವಾದ ನಿಸರ್ಗದ ಸೌಂದರ್ಯವನ್ನು ಎಲ್ಲರೂ ಆಸ್ವಾದಿಸಿದೆವು. ಮಡಿಕೇರಿಯ ಉಡುಪಿ ಹೋಟೆಲ್‌ನಲ್ಲಿ ಉಪಹಾರವನ್ನು ಸೇವಿಸಿ ಎಲ್ಲರೂ ತಲಕಾವೇರಿಗೆ ಪ್ರಯಾಣ ಬೆಳೆಸಿದೆವು. ಪ್ರಕೃತಿಯ ಮಡಿಲಲ್ಲಿ ಇರುವ ಕಾವೇರಿಯ ಉಗಮ ಸ್ಥಾನ ತಲಕಾವೇರಿಯ ಉಗಮ ಸ್ಥಳವನ್ನು ವೀಕ್ಷಿಸಿ ಎಲ್ಲಾ ಪದಾಧಿಕಾರಿಗಳು ಪುನೀತರಾದೆವು. ಕರ್ನಾಟಕದ ಜೀವನದಿ ಕಾವೇರಿಯ ಉಗಮಸ್ಥಾನ ತಲಕಾವೇರಿಯ ಮನೋಹರವಾದ ಸೌಂದರ್ಯವನ್ನು ಸವಿದು ಭಾಗಮಂಡಲದ ಭಗಂಡೇಶ್ವರ ದೇವಾಲಯವನ್ನು ನೋಡಲಾಯಿತು. ದೇವಾಲಯದ ಪ್ರಾಂಗಣದಲ್ಲಿರುವ ಕೆತ್ತನೆಗಳನ್ನು ನೋಡಿ ಮೂಕವಿಸ್ಮಿತರಾದೆವು. ಭಾಗಮಂಡಲದಿಂದ ಮಡಿಕೇರಿಗೆ ಹಿಂದಿರುಗಿ ಅಲ್ಲಿನ ವಸ್ತು ಸಂಗ್ರಹಾಲಯ ಮತ್ತು ಕೋಟೆಯನ್ನು ಸಂದರ್ಶಿಸಿದೆವು. ಮಧ್ಯಾಹ್ನದ ಊಟವನ್ನು ಉಡುಪಿ ದರ್ಶಿನಿಯಲ್ಲಿ ಸವಿದು ಸಂಜೆಯ ವೇಳೆಗೆ ಶ್ರೀರಂಗಪಟ್ಟಣದ ನಿಮಿಷಾಂಭ ದೇವಾಲಯಕ್ಕೆ ಭೇಟಿಯನ್ನು ಕೊಟ್ಟೆವು. ಎಲ್ಲರೂ ಶುಚಿಯಾಗಿ ದೇವಿಯ ದರ್ಶನ ಪಡೆದೆವು. ಅಲ್ಲಿಯೇ ನದಿ ತೀರದಲ್ಲಿ ಬೈಠಕ್ ಮಾಡಿ ನಮ್ಮ ಪ್ರವಾಸದ ಸವಿ ಕ್ಷಣಗಳ ಅನಿಸಿಕೆಗಳನ್ನು ಶ್ರೀ ಜೆ.ಎಂ ಜೋಷಿರವರ ನೇತೃತ್ವದಲ್ಲಿ ಹಂಚಿಕೊಂಡೆವು. ಎಲ್ಲಾ ಪದಾಧಿಕಾರಿಗಳ ಈ ರೀತಿಯ ಪ್ರವಾಸವು ನಮಗೆ ಸ್ಫೂರ್ತಿಯನ್ನು ಕೊಟ್ಟು ಹೊಸ ಚೈತನ್ಯವನ್ನು ತುಂಬುತ್ತವೆ ಎಂದು ತಿಳಿಸಿದರು. ಅಲ್ಲಿಂದ ಪ್ರಯಾಣ ಬೆಳೆಸಿ ರಾತ್ರಿ 9–00 ಗಂಟೆಗೆ ನಮ್ಮ ಕಾರ್ಯಾಲಯವನ್ನು ತಲುಪಿ ಸುಖಕರವಾದ ಪ್ರವಾಸವನ್ನು ಮುಗಿಸಿ, ಕಾರ್ಯಕರ್ತರನ್ನು ಅವರವರ ಮನೆಗೆ ಬೀಳ್ಕೊಡಲಾಯಿತು.

– ಶ್ರೀ ಗಂಗಾಧರ.ಎಂ.ವಿ., ಅಧ್ಯಕ್ಷರು, ಕ.ರಾ.ಮಾ.ಶಿ.ಸಂ., ಬೆಂಗಳೂರು ಉತ್ತರವಲಯ–3

## ಓದುಗರ ಸ್ಪಂದನೆ

**ಶ್ರೀ ರಾಮನ ಪ್ರಾಣ ಪ್ರತಿಷ್ಠಾಪನೆ, ವಿವಿಧ ರಾಜ್ಯಗಳಲ್ಲಿ ಸಂಕ್ರಾಂತಿ ಹಬ್ಬದ ವಿಶೇಷ ಆಚರಣೆ ಹಾಗೂ ಅದರ ಸಂದೇಶ, ಹಿಂದುತ್ವದ ಪರಿಪಾಲನೆಯ ಅಗತ್ಯತೆ, ರಾಷ್ಟ್ರೀಯ ಭಾವೈಕ್ಯತೆ, ರಾಷ್ಟ್ರೀಯ ನೇತಾರರ ಹೋರಾಟದ ವಿಚಾರಗಳು ಓದಿದಾಗ ಒಂದೊಂದು ವಿಚಾರದಲ್ಲೂ ಭಾರತದ ಇತಿಹಾಸ, ಭಾರತದ ವೈವಿಧ್ಯತೆ, ಭಾರತದ ಸಮಗ್ರತೆ ಹಾಗೂ ಏಕತೆಯನ್ನು ತಿಳಿಸುವ ಪ್ರಯತ್ನ ಉತ್ತಮವಾಗಿ ಮೂಡಿ ಬಂದಿದೆ ಈ ಮಾಸಪತ್ರಿಕೆಯನ್ನು ಓದಿದ ನಾವೇ ಧನ್ಯರು.**

**– ವಿಜಯಲಕ್ಷ್ಮಿ ಬಿ., ಹಿರಿಯ ಸಹ ಶಿಕ್ಷಕರು, ಕರ್ನಾಟಕ ಪಬ್ಲಿಕ್ ಶಾಲೆ, ದೊಡ್ಡ ಆಲಹಳ್ಳಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ**

**ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ ಸಂಪಾದಕ ಮಂಡಳಿಯ ಸದಸ್ಯರಿಗೆ ನನ್ನ ನಮಸ್ಕಾರಗಳು. ಜನವರಿ–2024ರ ಸಂಚಿಕೆಯು ಬಹಳ ಸುಂದರವಾಗಿ ಮೂಡಿಬಂದಿದೆ. ಪ್ರತಿಯೊಂದು ಲೇಖನದವೂ ಓದುಗರ ಹಸಿವನ್ನು ನೀಗಿಸುವಂತಿದೆ. ಗಣರಾಜ್ಯೋತ್ಸವದ ಅಮೃತೋತ್ಸವ ಎಂಬ ಲೇಖನದಲ್ಲಿ ಬಂದಿರುವ ಮಾಹಿತಿ ತುಂಬಾ ಚೆನ್ನಾಗಿದೆ. ರಾಮ ಮಂದಿರದ ಇತಿಹಾಸ ಬಗ್ಗೆ ಬರೆದಿರುವ ಲೇಖನವು ಕೂಡ ಚೆನ್ನಾಗಿದೆ. ಆಯಾ ತಿಂಗಳ ವಿಶೇಷದ ಬಗ್ಗೆ ಒಂದು ಲೇಖನ ಇದ್ದೇ ಇರುತ್ತದೆ. ಇದರಿಂದ ಆಯಾ ತಿಂಗಳ ವಿಶೇಷತೆಯನ್ನು ಈ ವಿಷಯದ ಮಹತ್ವವನ್ನು ತಿಳಿಸುವ ಲೇಖನಗಳು ಓದಲು ತುಂಬಾ ಸಂತೋಷವಾಗುತ್ತದೆ. ನನ್ನ ಚಂದಾ ಹಣ ಮುಗಿದ ತಕ್ಷಣ ತಿಳಿಸಿ. – ಗುಂಡಾಚಾರ್ ಎ., ಹಿರಿಯ ಕಾರ್ಯಕರ್ತರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬಳ್ಳಾರಿ**

# ವಿದ್ಯಾರ್ಥಿಗಳಿಗೆ ಪ್ರಧಾನಮಂತ್ರಿಗಳ ಸಲಹೆಗಳು

**ನಮ್ಮ ಭಾರತದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು 2024ನೇ ಸಾಲಿನ "ಪರೀಕ್ಷಾ ಪೆ ಚರ್ಚಾ" ಕಾರ್ಯಕ್ರಮದಲ್ಲಿ ಈ ಕೆಳಗಿನ ಸಲಹೆಗಳನ್ನು ಪರೀಕ್ಷೆ ಎದುರಿಸುವವರಿಗೆ, ಪರೀಕ್ಷಾ ಭಯ ಹೋಗಲಾಡಿಸಲು ಮತ್ತು ವಿದ್ಯಾರ್ಥಿಗಳು ಆತ್ಮ ವಿಶ್ವಾಸದಿಂದ ಪರೀಕ್ಷೆ ಎದುರಿಸಲು ನೀಡಿದ್ದಾರೆ. ಅದರಲ್ಲಿಯ ಪ್ರಮುಖ ಅಂಶಗಳನ್ನು ತಮಗೆ ತಿಳಿಸಲಾಗಿದೆ.**

- ಯಾರೇ ಆಗಲಿ, ನೀರಿಗೆ ಇಳಿಯದ ಹೊರತು ಈಜು ಕಲಿಯಲು ಸಾಧ್ಯವಿಲ್ಲ. ಹಾಗೆಯೇ ಹಳೆಯ ಪ್ರಶ್ನೆಪತ್ರಿಕೆಗಳಿಗೆ, ಉತ್ತರ ಬರೆದು, ನೋಟ್ಸ್‌ಗಳನ್ನು ಮಾಡಿಕೊಂಡು ಪರೀಕ್ಷೆಗೆ ತಯಾರಾಗಿ ಬರೆದು ಅಭ್ಯಾಸ ಮಾಡಿಕೊಂಡರೆ, ಮನನ ಮಾಡಿಕೊಂಡರೆ ಪರೀಕ್ಷೆಯಲ್ಲಿ ಯಶಸ್ವಿಯಾಗಿ ತೇರ್ಗಡೆ ಹೊಂದಬಹುದು.
- ವ್ಯಾಯಾಮವು ವಿದ್ಯಾರ್ಥಿಗಳಿಗೆ ಪ್ರಮುಖವಾಗಿದೆ. ನಿತ್ಯವೂ ಬೆಳಗ್ಗೆ ಎದ್ದು ಹಲ್ಲುಜ್ಜುವ ರೀತಿ, ಬೆಳಗ್ಗೆ ಎದ್ದ ತಕ್ಷಣ 10 ನಿಮಿಷವಾದರೂ ವ್ಯಾಯಾಮ ಮಾಡಿ. ಇದರಿಂದ ದೇಹವು ಉಲ್ಲಾಸಗೊಳ್ಳುತ್ತದೆ. ದೈಹಿಕ ಚಟುವಟಿಕೆಯು ವಿದ್ಯಾರ್ಥಿಗಳಿಗೆ ಪ್ರಮುಖವಾಗಿದೆ.
- ಮಕ್ಕಳು ಓದುವುದು, ಬರೆಯುವುದು, ಮನನ ಮಾಡಿಕೊಳ್ಳುವುದು ಎಷ್ಟು ಮುಖ್ಯವೋ ಆಹಾರವೂ ಅಷ್ಟೇ ಮುಖ್ಯ. ಪರೀಕ್ಷೆಯ ದಿನಗಳಲ್ಲಿ ನಿಯಮಿತ ಆಹಾರ ಸೇವಿಸಿ, ಬಡತನ ಇರಲಿ, ಸಿರಿತನ ಇರಲಿ ಇರುವ ಆಹಾರ ಸೇವಿಸಿ, ಸರಿಯಾದ ಸಮಯಕ್ಕೆ ಊಟ ಮಾಡಿ.
- ವಿದ್ಯಾರ್ಥಿಗಳು ಒಂದೇ ಕಡೆ ಓದುವ ಬದಲು ಎಳೆ ಬಿಸಿಲಿನಲ್ಲಿ ಕುಳಿತು ಓದಬೇಕು. ಶಾಂತಿಯುತ ವಾತಾವರಣದಲ್ಲಿ ಅಧ್ಯಯನ ಮಾಡಬೇಕು. ಸರಿಯಾಗಿ ನಿದ್ದೆ ಮಾಡಬೇಕು. ಮೊಬೈಲ್‌ನಲ್ಲಿ ಒಂದರ ಹಿಂದೆ ಒಂದು ರೀಲ್ಸ್‌ಗಳನ್ನು ನೋಡಿದರೆ ಮೊದಲು ನೋಡಿದ ರೀಲ್ ನೆನಪಿರುವುದಿಲ್ಲ. ಹಾಗಾಗಿ ಎಡಬಿಡದೆ ಓದುವ ಬದಲು ದೇಹಕ್ಕೆ ಬೇಕಾಗುವಷ್ಟು ನಿದ್ದೆ ಮಾಡಬೇಕು. ಇದು ಮೆದುಳು, ಮನಸ್ಸು ಹಾಗೂ ದೇಹದ ಮೇಲೆ ಪರಿಣಾಮ ಬೀರುತ್ತದೆ. ಹಾಗಂತ ಯಾವಾಗಲು ಬರೀ ನಿದ್ದೆಯನ್ನೇ ಮಾಡಬೇಡಿ ಎಂದು ಪ್ರಧಾನಿ ಚಟಾಕಿ ಹಾರಿಸಿದರು.
- ಎಲ್ಲ ವಿದ್ಯಾರ್ಥಿಗಳ ಬಳಿಯೂ, ಮನೆಗಳಲ್ಲಿ ಮೊಬೈಲ್ ಇದೆ. ಆ ಮೊಬೈಲ್‌ಅನ್ನು ನಿತ್ಯ ಚಾರ್ಜ್ ಮಾಡದಿದ್ದರೆ ಅದು ಸ್ವಿಚ್‌ಆಫ್ ಆಗುತ್ತದೆ. ಹಾಗೆಯೇ, ಮನುಷ್ಯನ ದೇಹವನ್ನೂ ರಿಚಾರ್ಜ್ ಮಾಡಬೇಕಾಗುತ್ತದೆ. ಅದರಲ್ಲೂ, ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಮೆದುಳು, ಮನಸ್ಸಿನ ಜತೆಗೆ ದೇಹವನ್ನೂ ಉಲ್ಲಸಿತಗೊಳಿಸಬೇಕು.
- ವಿದ್ಯಾರ್ಥಿಗಳು ಓದಿಕೊಂಡು, ಬರೆದುಕೊಂಡು ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುವಾಗಲೇ ಶಿಕ್ಷಕರೊಂದಿಗೆ ಉತ್ತಮ ಒಡನಾಟ ಇಟ್ಟುಕೊಳ್ಳಬೇಕು. ಓದುವಾಗ ಗೊಂದಲ ಬಂದರೆ ಶಿಕ್ಷಕರಿಗೆ ಪ್ರಶ್ನೆ ಕೇಳಬೇಕು. ಮನೆಯಲ್ಲಿದ್ದರೆ ಮೊಬೈಲ್ ಕರೆ ಮಾಡಬೇಕು. ಆಗ ತಕ್ಷಣವೇ ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ.
- ಪರೀಕ್ಷೆಗೆ ಹೆಚ್ಚಿನ ವಿದ್ಯಾರ್ಥಿಗಳು ಓದಿಕೊಂಡು ಹೋಗುತ್ತಾರೆಯೇ ಹೊರತು, ಮೊದಲು ಬರೆದು ಬರೆದು ಅಭ್ಯಾಸ ಮಾಡಿಕೊಂಡಿರುವುದಿಲ್ಲ. ಹಾಗಾಗಿ ಎಷ್ಟೇ ಓದಿದರೂ ಪರೀಕ್ಷೆಯಲ್ಲಿ ಉತ್ತಮವಾಗಿ ಬರೆಯಲು ಆಗುವುದಿಲ್ಲ. ಹಾಗಾಗಿ ಪರೀಕ್ಷೆಗೂ ಮೊದಲು ಪ್ರಶ್ನೆಗಳಿಗೆ ಉತ್ತರ ಬರೆದು ಬರೆದು ಅಭ್ಯಾಸ ಮಾಡಿಕೊಳ್ಳಿ. ಆಗ ಮನನವೂ ಆಗುತ್ತದೆ. ಪರೀಕ್ಷೆಯಲ್ಲಿ ಸುಲಭವಾಗಿ ಬರೆಯುವುದೂ ಸಾಧ್ಯವಾಗುತ್ತದೆ.
- ರೈಲು ಬರುತ್ತಲೇ ಯಾರೂ ಸ್ಟೇಷನ್ ತಲುಪುವುದಿಲ್ಲ. ರೈಲು ಬರುವ 10 ನಿಮಿಷ ಮುಂಚೆಯೇ ತೆರಳುತ್ತೇವೆ. ಹಾಗೆಯೇ ಪರೀಕ್ಷೆಯ ಕೊಠಡಿಗೂ ಮೊದಲೇ ತೆರಳಬೇಕು. ಕೊಠಡಿಯ ಬಾಗಿಲಿನವರೆಗೆ ಪುಸ್ತಕ ಹಿಡಿದುಕೊಂಡು ಹೋಗಬಾರದು. 10 ನಿಮಿಷ ಮೊದಲೇ ಪರೀಕ್ಷಾ ಕೇಂದ್ರಕ್ಕೆ ತೆರಳಿ, ಗೆಳೆಯರೊಂದಿಗೆ ಮಾತನಾಡಿ, ಒಂದು ಜೋಕ್ ಹೇಳಿ ಮೊದಲು ನಿರಾತಂಕವಾಗಿ ಉಸಿರಾಡಿ.
- ಪ್ರಶ್ನೆ ಪತ್ರಿಕೆ ಕೈಗೆ ನೀಡುತ್ತಲೇ ಗಾಬರಿಯಾಗದಿರಿ. ಪ್ರಶ್ನೆ ಪತ್ರಿಕೆ ಸಿಗುತ್ತಲೇ ಎಲ್ಲ ಪ್ರಶ್ನೆಗಳನ್ನು ಓದಿಕೊಳ್ಳಿ. ಯಾವ ಪ್ರಶ್ನೆಗೆ ಹೆಚ್ಚು ಸಮಯ ಬೇಕಾಗುತ್ತದೆ ಎಂಬುದನ್ನು ಯೋಚಿಸಿ. ಊಟ ಮಾಡುವಾಗ ಯಾರೂ ಗಡಿಯಾರ ನೋಡುವುದಿಲ್ಲ. ಹಾಗೆಯೇ ಪರೀಕ್ಷೆ ಬರೆಯುವಾಗ ಅನಗತ್ಯವಾಗಿ ಗಡಿಯಾರ ನೋಡಿಕೊಳ್ಳದಿರಿ. ಅವಸರಕ್ಕೆ ಬಿದ್ದು ಬರೆಯಲು ಮುಂದಾಗದಿರಿ.
- ನಾವು ಚಳಿಯೊಂದಿಗೆ ಜೀವನ ಸಾಗಿಸುವ ಮನಸ್ಥಿತಿ ರೂಢಿಸಿಕೊಂಡರೆ ಹೆಚ್ಚು ಚಳಿ ಎನಿಸುವುದಿಲ್ಲ. ಪರೀಕ್ಷೆಯೂ ಹಾಗೆಯೇ, ನಾವು ಮೊದಲು ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸುವ ದೃಢ ನಿಶ್ಚಯ ಮಾಡಿಕೊಳ್ಳಬೇಕು. ನಾವು ಮೊದಲು ಮೆದುಳನ್ನು ಪರೀಕ್ಷೆಗೆ ಸಿದ್ಧಗೊಳಿಸುವ ಜತೆಗೆ ಮನಸ್ಸನ್ನೂ ಹುರಿಗೊಳಿಸಬೇಕು. ಈ ಪರೀಕ್ಷೆಯಲ್ಲಿ ನಾನು ಉತ್ತಮ ಅಂಕ ಪಡೆಯುತ್ತೇನೆ ಎಂದು ನಿಶ್ಚಯ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

●

---

**ಯಾರ ಕೃಪೆಯು ಮೂಖನನ್ನು ವಾಚಾಳಿಯನ್ನಾಗಿ ಮಾಡುವುದೋ, ಕುಂಟನು ಪರ್ವತವನ್ನು ಲಂಘಿಸುವಂತೆ ಮಾಡುವುದೋ ಅಂತಹ ಪರಮಾನಂದ ಸ್ವರೂಪನಾದ ಮಾಧವನನ್ನು ವಂದಿಸುತ್ತೇನೆ. – ಭಗವದ್ಗೀತೆ**

# ಪ್ರಶ್ನೆಗಳಿಲ್ಲದ ವರ್ಗ ಸತ್ತವರ ವರ್ಗವಿದ್ದಂತೆ : ಪ್ರೊ. ಮೋಹನ ಸಿದ್ಧಾಂತಿ



ಶಿಕ್ಷಕರು ಯಾವತ್ತು ತಪ್ಪು ಮಾಡಬಾರದು, ಜಗತ್ತಿನಲ್ಲಿ ಯಾರೇ ತಪ್ಪು ಮಾಡಿದರೂ ಏನೂ ಅನ್ನದ ಜಗತ್ತು, ಶಿಕ್ಷಕರು ತಪ್ಪು ಮಾಡಿದರೆ ಕೈ ಮಾಡಿ ತೋರಿಸುತ್ತದೆ. ಶಿಕ್ಷಕರಿಗೆ ಹೇಳಿದರೆ ಕರ್ತವ್ಯ ಬರದು !, ಅದನ್ನು ಪಾಲಿಸಬೇಕು, ಕರ್ತವ್ಯ ಮಾಡಲಾಗದ ಶಿಕ್ಷಕರು ನೌಕರಿ ಬಿಟ್ಟು ಹೋಗಬೇಕು ಎಂದು ಮಾರ್ಮಿಕವಾಗಿ ಹೇಳಿದರು.

ನಗರದ ಕನಕದಾಸ ಶಿಕ್ಷಣ ಮಹಾವಿದ್ಯಾಲಯದ ಬಿ.ಇಡಿ ಸಭಾಂಗಣದಲ್ಲಿ ಕೆಆರ್‌ಎಂಎಸ್‌ಎಸ್ ಮತ್ತು ಎಬಿಆರ್‌ಎಸ್‌ಎಂ ವತಿಯಿಂದ ಶನಿವಾರ ಶಿಕ್ಷಕರಿಗೆ ಹಮ್ಮಿಕೊಳ್ಳಲಾಗಿದ್ದ ಕಾಯಕ ಸಂಕಲ್ಪ ದಿನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಪ್ರಶ್ನೆಗಳಿಲ್ಲದ ವರ್ಗ ಸತ್ತವರ ವರ್ಗವಿದ್ದಂತೆ ಹಾಗಾಗಿ ಮಕ್ಕಳು ಪ್ರಶ್ನೆ ಕೇಳಿದಾಗ ಗದರಿಸದೆ ಸೂಕ್ತ ಉದಾಹರಣೆಗಳೊಂದಿಗೆ ಸಮಾಧಾನವಾಗಿ ಉತ್ತರಿಸಬೇಕು. ಶಿಕ್ಷಕರ ಕೈಯಲ್ಲಿ ಅಧಿಕಾರ ಬಂದಾಗ ಅದು ಮತ್ತೊಬ್ಬರಿಗೆ ಉಪಯೋಗಕಾರಿಯಾಗಬೇಕು, ನಾಲ್ಕು ಗೋಡೆಯ ಮಧ್ಯದಲ್ಲಿ ರೂಪಿತವಾಗುವ ವಿದ್ಯಾರ್ಥಿಗಳ ಜೀವನ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಬಹಳ ಪ್ರಮುಖವಾಗಿದ್ದು, ಶಿಕ್ಷಕನಿಗೆ ಸಮಯದ ಜಾಗೃತಿ ಅವಶ್ಯವಾಗಿ ಬರಬೇಕು ಅದು ಬಂದರೆ ಅವರ ವ್ಯಕ್ತಿತ್ವ ಬದಲಾಗುತ್ತದೆ. ಒಳ್ಳೆ ಗುಣಗಳಿಂದ ಒಳ್ಳೆ ದಿನಗಳು ಬರಬೇಕಾದರೆ ಆಸಕ್ತಿಯಿಂದ ಶಿಕ್ಷಕ ವೃತ್ತಿಗೆ ಬರಬೇಕು, ರೊಕ್ಕ ಬೇಕೆಂದರೆ ಈ ವೃತ್ತಿಗೆ ಬರಬಾರದು ಎಂದು ಹೇಳಿದರು.

ಶಿಕ್ಷಕರು ವಿದ್ಯಾರ್ಥಿಗಳನ್ನು ಸಂಸ್ಕಾರವಂತರನ್ನಾಗಿಸಬೇಕು, ಕಾಲ ಬದಲಾದಂತೆ ಶಿಕ್ಷಕರು ಬದಲಾಗಬೇಕು. ತರಗತಿಗೆ ಹೊರಡುವ ಮುನ್ನ ಸಕಲ ಸಿದ್ಧತೆಗಳೊಂದಿಗೆ ಶಿಕ್ಷಕ ತಯಾರಾಗಿರಬೇಕು, ಗ್ರಂಥಾಲಯಗಳು ಪುಸ್ತಕಗಳಿಂದ ತುಂಬಿ ತುಳಕುತ್ತಿವೆ. ಆದರೆ ಓದುವ ಶಿಕ್ಷಕ ಮತ್ತು ವಿದ್ಯಾರ್ಥಿ ಮನಸ್ಸುಗಳ ಕೊರತೆ ಎದ್ದು ಕಾಣುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಶಿಕ್ಷಕರು ಹೇಳಿದ್ದೇ ಸರ್ವಸ್ವ ಎಂಬ ಕಾಲವಿತ್ತು? ಆದರೆ ಈಗ ವಿದ್ಯಾರ್ಥಿಗಳು ಗೂಗಲ್ ಜಗತ್ತಿನಲ್ಲಿದ್ದಾರೆ. ಹಾಗಾಗಿ ಶಿಕ್ಷಕರಿಗೆ ಪಾಂಡಿತ್ಯ, ಅಧ್ಯಾಪನ, ಬೋಧನಾ ಸಾಮರ್ಥ್ಯ, ಪ್ರೇರಣಾ ಸಾಮರ್ಥ್ಯ ಮತ್ತು ನಡೆ ನುಡಿಗಳನ್ನು ಚೆನ್ನಾಗಿಟ್ಟುಕೊಳ್ಳಬೇಕು ಏಕೆಂದರೆ ವಿದ್ಯಾರ್ಥಿಗಳು ನಮ್ಮನ್ನು ಅವಲೋಕಿಸುತ್ತಿರುತ್ತಾರೆ. ಹಾಗಾಗಿ ಶಿಕ್ಷಕರ ಮೌಲ್ಯಗಳು ವೃದ್ಧಿಯಾಗಬೇಕೆ ಹೊರತು ಪಠ್ಯ ಬೋಧನೆ ಮುಗಿಯಿತೆಂದು ಕೈ ಚೆಲ್ಲಿ ಕೂಡಬಾರದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ಧ ಎಬಿ.ಆರ್‌ಎಸ್.ಎಂನ ದಕ್ಷಿಣ ಮಧ್ಯ ಕ್ಷೇತ್ರಿಯ ಪ್ರಮುಖರಾದ ಡಾ. ರಘು ಅಕಮಂಚಿ ಮಾತನಾಡಿ, ಪ್ರತಿ ಶಿಕ್ಷಕರು ಶಿಕ್ಷಕರಿಂದ ಗುರು ಆಗುವತ್ತ ಹೆಜ್ಜೆ ಹಾಕಬೇಕು ಎಂದು ಹೇಳಿದರು. ಶಿಕ್ಷಕರು ನಿರಂತರ ಅಧ್ಯಯನಶೀಲರಾಗಿರಬೇಕು, ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿ ಹೆಚ್ಚಿಸುವವರಾಗಿದ್ದು ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಸದಾ ಪಾಲಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೆ.ಆರ್‌ಎಂ.ಎಸ್.ಎಸ್ ರಾಜ್ಯಾಧ್ಯಕ್ಷ ಸಂದೀಪ ಬೂದಿಹಾಳ, ಕೆ.ಯು.ಡಿ ವಿಭಾಗದ ಮಹಿಳಾ ಪ್ರಮುಖರಾದ ಪ್ರೊ. ಶೈಲಜಾ ಹುದ್ದಾರ ಸೇರಿದಂತೆ ಶಿಕ್ಷಕ ಸಂಘಟನೆಗಳ ಪದಾಧಿಕಾರಿಗಳು ಸೇರಿದಂತೆ ನೂರಾರು ಶಿಕ್ಷಕರು, ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕಿ ಶ್ರೀಮತಿ ಶೋಭಾ ಉಜ್ಜಯಿನಶೆಟ್ಟರ ಪ್ರಾರ್ಥಿಸಿದರು, ಡಾ. ಸಿ.ವಿ ಮರಿದೇವರಮಠ ಸ್ವಾಗತ ಮತ್ತು ಪರಿಚಯಿಸಿದರು, ಬಸವರಾಜ ದೇವರಮನಿ ಸಂಕಲ್ಪ ಬೋಧನೆ ಮಾಡಿಸಿದರು, ಡಾ. ರಾಜಕುಮಾರ ಪಾಟೀಲ ನಿರೂಪಿಸಿದರು, ಡಾ. ಜಯಾನಂದ ಹಟ್ಟಿ ವಂದಿಸಿದರು, ಶಾಂತಿಮಂತ್ರದಿಂದ ಕಾರ್ಯಕ್ರಮ ಮುಗಿಸಲಾಯಿತು.

# ಸಂಕಲ್ಪ ದಿನಾಚರಣೆ: ಬೆಂಗಳೂರು ದಕ್ಷಿಣ ಜಿಲ್ಲೆ



**03–02–2024** ಶನಿವಾರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ದಕ್ಷಿಣ ಜಿಲ್ಲಾ ವತಿಯಿಂದ ಸಂಕಲ್ಪ ದಿನಾಚರಣೆಯನ್ನು ಸ್ವಾಮಿ ವಿವೇಕಾನಂದ ವಿದ್ಯಾನಿಕೇತನ, ನೆರಳೂರು ಇಲ್ಲಿ ಏರ್ಪಡಿಸಲಾಗಿತ್ತು.

ಶ್ರೀ ಗಂಗಾಧರಾಚಾರಿ, ಉಪಾಧ್ಯಕ್ಷರು, ಕೆ ಆರ್ ಎಮ್ ಎಸ್ ಎಸ್ ಇವರು ಮುಖ್ಯ ವಕ್ತಾರರಾಗಿ ಸಭೆಯನ್ನು ಉದ್ದೇಶಿಸಿ ಸ್ವಾಮಿ ವಿವೇಕಾನಂದ ಹಾಗೂ ನೇತಾಜಿ ಸುಭಾಷ್ ಚಂದ್ರ ಬೋಸ್‌ರವರ ಜೀವನಾದರ್ಶಗಳನ್ನು ಹಲವು ದೃಷ್ಟಾಂತಗಳ ಮೂಲಕ ಸಭಿಕರಿಗೆ ಬಹಳ ಸೊಗಸಾಗಿ ಮನವರಿಕೆ ಮಾಡಿಕೊಟ್ಟರು. ಶ್ರೀ ನಾರಾಯಣ ಭಟ್ಟ ಪ್ರಧಾನ ಕಾರ್ಯದರ್ಶಿ ಇವರು ಪ್ರಾಸ್ತಾವಿಕವಾಗಿ ಸಂಕಲ್ಪ ದಿನಾಚರಣೆಯ ಮಹತ್ವವನ್ನು ತಿಳಿಸಿದರು. ಶ್ರೀ ಚನ್ನಕೃಷ್ಣಪ್ಪ, ಖಜಾಂಚಿ ಬೆಂ ದ ಜಿಲ್ಲೆ ಇವರು ಪ್ರತಿಜ್ಞಾ ವಿಧಿ ಬೋಧಿಸಿದರು. ಸ್ವಾಮಿ ವಿವೇಕಾನಂದ ವಿದ್ಯಾನಿಕೇತನ ನೆರಳೂರು ಈ ಶಾಲೆಯ ಆಡಳಿತಾಧಿಕಾರಿ, ಶ್ರೀ ಮಹೇಶ ಕುಮಾರ್ ಜೋಶಿ ಇವರು ಸಂಘದ ಈ ಕಾರ್ಯವು, ಶಿಕ್ಷಕರು ತಮ್ಮ ಕರ್ತವ್ಯವನ್ನು ಇನ್ನೂ ಹೆಚ್ಚು ಗೌರವದಿಂದ ಶ್ರದ್ಧೆಯಿಂದ ಮಾಡುವಂತೆ ಪ್ರೇರೇಪಿಸಿದೆ ಎಂದು ಅಭಿಪ್ರಾಯಪಟ್ಟರು. ಶಾಲಾ ವಿದ್ಯಾರ್ಥಿಗಳಿಂದ ದೇಶಭಕ್ತಿ ಗೀತೆ ಹಾಗೂ ಅಲ್ಲಿಯ ಶಿಕ್ಷಕರು ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿದರು ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ನಾರಾಯಣ ಭಟ್ಟ, ಪ್ರಧಾನ ಕಾರ್ಯದರ್ಶಿ, ಕೆಆರ್‌ಎಮ್‌ಎಸ್‌ಎಸ್

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-02-2024 Date of Posting 20th or 21st of every month Posted at Periodical Rate

# ರಾಜ್ಯದ ವಿವಿಧೆಡೆಗಳಲ್ಲಿ ನಡೆದ ಸಂಕಲ್ಪ ದಿನಾಚರಣೆ


ಬಾಗಲಕೋಟೆ


ಚಿಕ್ಕೋಡಿ


ಬೀಳಗಿ


ಬೆಂಗಳೂರು ದಕ್ಷಿಣ


ವಿಜಯಪುರ


ಇಂಡಿ

## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು, ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**
ಇ–ಮೇಲ್‌ಗೆ ಕಳುಹಿಸಿಕೊಡಿ

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com